ಪ್ರಕಟಣೆ - 198

ಅರಣ್ಯಶಾಸ್ತ್ರ ಪಾರಿಭಾಷಿಕ ಶಬ್ದಕೋಶ

ಪ್ರಾಯೋಜನೆ ಮುಂದಾಳು : ಎಚ್. ಕೆ. ನರಸಿಂಹೇಗೌಡ
ಪ್ರಾಯೋಜನೆ ಸಹಭಾಗಿ : ಪಿ. ಕೆ. ಕುಮುದಿನಿ

ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು - 560 024

ಪ್ರಕಟಣೆ - 198

ಅರಣ್ಯಶಾಸ್ತ್ರ ಪಾರಿಭಾಷಿಕ ಶಬ್ದಕೋಶ

ಪ್ರಾಯೋಜನೆ ಮುಂದಾಳು : ಎಚ್. ಕೆ. ನರಸಿಂಹೇಗೌಡ
ಪ್ರಾಯೋಜನೆ ಸಹಭಾಗಿ : ಸಿ. ಕೆ. ಕುಮುದಿನಿ

1996

ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು - 560 024

ಅರಣ್ಯಶಾಸ್ತ್ರ ಪಾರಿಭಾಷಿಕ ಶಬ್ದಕೋಶ (ಕೃಷಿ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ವಿಭಾಗದಿಂದ ಸಿದ್ಧಗೊಂಡು ಪ್ರಕಾಶಿತ) - ಪ್ರಥಮ ಮುದ್ರಣ : 1996, ಪ್ರತಿಗಳು : 1000, ಪುಟಗಳ : viii+130.

ಬೆಲೆ ರೂ : 34 - 00

© ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ವಿಭಾಗದ ಸಂಶೋಧನ ಪ್ರಾಯೋಜನೆ ಸಂಖ್ಯೆ ಡಿ.ಆರ್.ಯುಎಎಸ್. ಕೆ:1,1986ರ ಫಲವಾಗಿ ಇದು ಸಂಕಲನ ಗೊಂಡಿದೆ.

ಮುದ್ರಣ :
ಕಾಂಪೇಜರ್ಸ್ ಡಿ.ಟಿ.ಪಿ. ಸರ್ವೀಸಸ್,
360, 10ನೇ ಅಡ್ಡರಸ್ತೆ,
ಮಹಾಲಕ್ಷ್ಮೀ ಲೇಔಟ್,
ಬೆಂಗಳೂರು - 560 086.

ಕುಲಪತಿಗಳ ಹಾರೈಕೆ

ಕನ್ನಡ ಅಧ್ಯಯನ ವಿಭಾಗ ಪ್ರಾರಂಭವಾಗಿ 25 ವರ್ಷಗಳು ಸಂದಿವೆ. ಶಿಕ್ಷಣ ಮಾಧ್ಯಮ ಪ್ರಾದೇಶಿಕ ಭಾಷೆಗಳಲ್ಲಿ ನಡೆಯಬೇಕೆಂಬ ತೀರ್ಮಾನವನ್ನು 1964 ರಲ್ಲಿಯೇ ಸಂಸತ್ತು ಕೈಗೊಂಡಿದೆ. ಅದನ್ನು ಕಾರ್ಯರೂಪಕ್ಕೆ ತರುವ ಪ್ರಯತ್ನ ರಾಷ್ಟ್ರಾದ್ಯಂತ ನಡೆದಿರುವುದು ನಮ್ಮೆಲ್ಲರಿಗೂ ತಿಳಿದಿರುವ ವಿಷಯ. ನಮ್ಮ ವಿಶ್ವವಿದ್ಯಾನಿಲಯದಲ್ಲೂ ಸಹ ಈ ನಿರ್ಣಯವನ್ನು ಕಾರ್ಯರೂಪಕ್ಕೆ ತರುಬೇಕೆಂಬ ಪ್ರಯತ್ನದಿಂದಾಗಿಯೇ 1970 ರಲ್ಲಿ ಕನ್ನಡ ಅಧ್ಯಯನ ವಿಭಾಗ ಆರಂಭಗೊಂಡಿತು. ಇಲ್ಲಿ ಕನ್ನಡವನ್ನು ಕೃಷಿ ಶಿಕ್ಷಣ ಮಾಧ್ಯಮವಾಗುವಂತೆ ಮಾಡುವ ಪ್ರಥಮ ಹೆಜ್ಜೆಯಾಗಿ ಕೃಷಿ ವಿಭಾಗದ ವಿವಿಧ ವಿಷಯಗಳ ಮೇಲೆ ಕನ್ನಡದಲ್ಲಿ ಪಠ್ಯಪುಸ್ತಕಗಳನ್ನು ನಿರ್ಮಿಸುವ ಕಾರ್ಯ ನಡೆದಿದೆ. ಕನ್ನಡ ಅಧ್ಯಯನ ವಿಭಾಗ ಈ ತನ್ನ ಎರಡೂವರೆ ದಶಕಗಳ ಅವಧಿಯಲ್ಲಿ ಹತ್ತಿರ ಹತ್ತಿರ ಇನ್ನೂರು ಕೃಷಿವಿಜ್ಞಾನ ಪಠ್ಯ ಹಾಗೂ ಪರಾಮರ್ಶನ ಗ್ರಂಥಗಳನ್ನು ಪ್ರಕಟಿಸಿದೆ. ಪ್ರಕಟಿಸಿದ ಈ ಪುಸ್ತಕಗಳಲ್ಲಿ ಕೆಲವು ಪುಸ್ತಕಗಳ ಪ್ರತಿಗಳು ತೀರಿವೆ; ಕೆಲವು ಪುನರ್ ಮುದ್ರಣಗೊಂಡಿವೆ; ಮತ್ತೆ ಕೆಲವು ಪುಸ್ತಕಗಳ ಪುನರ್‌ಮುದ್ರಣ ಕಾರ್ಯ ನಡೆಯಬೇಕಿದೆ. ಕೃಷಿವಿಜ್ಞಾನ ಪ್ರಸಾರಕ್ಕೆ ಪುಸ್ತಕಗಳು ಪ್ರಬಲವಾದ ಮಾಧ್ಯಮ. ಅಂತೆಯೇ ಈ ಪುಸ್ತಕಗಳು ವಿದ್ಯಾರ್ಥಿಗಳಿಗೇ ಅಲ್ಲದೆ ಆನುಷಂಗಿಕವಾಗಿ ರೈತರಿಗೂ ತಿಳಿವಳಿಕೆಯ ಮಾರ್ಗದರ್ಶಿಗಳಾಗಿವೆ. ಈ ದೃಷ್ಟಿಯಿಂದ ನೋಡಿದಾಗ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳೇ ಅಲ್ಲದೆ ಕರ್ನಾಟಕದ ಪ್ರಗತಿಪರ ರೈತರುಗಳು ಸಹ ಇವುಗಳ ಉಪಯೋಗ ಪಡೆದಿದ್ದಾರೆಂದರೆ ಆತಿಶಯೋಕ್ತಿಯಲ್ಲ. ನಮ್ಮಲ್ಲಿ 8-10 ಲಕ್ಷ ರೂಪಾಯಿಗಳಷ್ಟು ಪುಸ್ತಕಗಳು ಮಾರಾಟವಾಗಿರುವುದೇ ಇದಕ್ಕೆ ಸ್ಪಷ್ಟ ನಿದರ್ಶನವಾಗಿದೆ.

ಇಷ್ಟಾದರೂ ಕೃಷಿ ವಿಜ್ಞಾನಗಳ ಎಲ್ಲ ವಿಷಯಗಳ ಮೇಲೂ ಪಠ್ಯಪುಸ್ತಕಗಳು ಇನ್ನೂ ಪ್ರಕಟವಾಗಿಲ್ಲ. ಈ ಕೆಲಸ ಈಗ ಆದ್ಯತೆಯ ಮೇಲೆ ನಡೆಯಬೇಕಾಗಿದೆ. ಇದಕ್ಕಾಗಿ ತಾಂತ್ರಿಕ ತಜ್ಞರು ಈ ದಿಶೆಯಲ್ಲಿ ಕೆಲಸ ಮಾಡಬೇಕು. ಈಗ್ಗೆ 25 ವರ್ಷಗಳ ಹಿಂದೆ ಕನ್ನಡ ಅಧ್ಯಯನ ವಿಭಾಗ ಆರಂಭವಾದಾಗ ನಮ್ಮಲ್ಲಿ ಕೃಷಿ ಬರಹಗಾರರ ಕೊರತೆ ಎದ್ದು ಕಾಣುತ್ತಿತ್ತು. ಈಗ ಪರಿಸ್ಥಿತಿ ಹಾಗಿಲ್ಲ. ಕೃಷಿ ವಿಶ್ವವಿದ್ಯಾನಿಲಯದಲ್ಲೂ ಸಹ ಉತ್ತಮ ಬರಹಗಾರರಿದ್ದಾರೆ. ಈ ತಾಂತ್ರಿಕ ಬರಹಗಾರರು ಕನ್ನಡದಲ್ಲಿ ಪಠ್ಯಪುಸ್ತಕಗಳನ್ನು ಬರೆಯುವ ಮನಸ್ಸು ಮಾಡಬೇಕು

ಅಷ್ಟೆ. ನಮ್ಮ ತಾಂತ್ರಿಕ ತಜ್ಞರು ಆಸಕ್ತಿ ವಹಿಸಿದರೆ ಕೃಷಿ ವಿಜ್ಞಾನದ ಎಲ್ಲ ವಿಷಯಗಳ ಮೇಲೆ ಕನ್ನಡದಲ್ಲಿ ಪಠ್ಯಪುಸ್ತಗಳನ್ನು ಹೊರತರುವುದು ಕಷ್ಟವೇನಲ್ಲ. ಕೃಷಿ ವಿಜ್ಞಾನದ ಎಲ್ಲ ವಿಷಯಗಳ ಮೇಲೆ ಕನ್ನಡದಲ್ಲಿ ಪಠ್ಯಪುಸ್ತಕಗಳು ಪ್ರಕಟವಾದಾಗ ಮಾತ್ರ ವಿದ್ಯಾರ್ಥಿಗಳು ಕನ್ನಡ ಮಾಧ್ಯಮದಲ್ಲಿ ಓದಲು ಹೆಚ್ಚು ಸಂಖ್ಯೆಯಲ್ಲಿ ಮುಂಬರುವುದು ಸಾಧ್ಯ. ಹಾಗೆಯೇ ಈಗಿರುವ ಬಿ.ಎಸ್ಸಿ (ಕೃಷಿ) ಕನ್ನಡ ಮಾಧ್ಯಮ ತರಗತಿಗಳ ಜೊತೆಗೆ ಮಿಕ್ಕ ಎಲ್ಲ ವಿಷಯಗಳ ಮೇಲೂ ಕನ್ನಡ ಮಾಧ್ಯಮ ತರಗತಿಗಳನ್ನು ತೆರೆಯುವುದು ಸಾಧ್ಯವಾದೀತು.

ಕೃಷಿ ವಿಶ್ವವಿದ್ಯಾನಿಲಯದಲ್ಲಿರುವ ಪ್ರತಿಯೊಬ್ಬ ಬೋಧಕರು ತಮ್ಮ ಸೇವಾವಧಿ ಪೂರ್ಣವಾಗುವುದರೊಳಗೆ ಕನಿಷ್ಠ ಒಂದು ಪುಸ್ತಕವನ್ನಾದರೂ ತಮ್ಮ ಪರಿಣತ ವಿಷಯದಲ್ಲಿ ಪ್ರಕಟಿಸುವರೆಂಬ ಆಸೆಯನ್ನು ಕೃಷಿ ವಿಶ್ವವಿದ್ಯಾನಿಲಯ ಹೊಂದಿದೆ. ವಾಸ್ತವವಾಗಿ ಕರ್ನಾಟಕದ ಕೃಷಿ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸಿರುವ ಸರ್ವರೂ ಕೃಷಿಕನ ನುಡಿಯಲ್ಲೇ ವ್ಯವಹರಿಸಬೇಕಾದುದು ಧರ್ಮ. ಈ ದೃಷ್ಟಿಯಿಂದ ಕನ್ನಡ ಮಾಧ್ಯಮದಲ್ಲಿ ಕಲಿತು ತೇರ್ಗಡೆಯಾದ ವಿದ್ಯಾರ್ಥಿಗಳು ರೈತರೊಡನೆ ವ್ಯವಹರಿಸುವಾಗ ಹೆಚ್ಚು ಪರಿಣಾಮಕಾರಿಯಾಗುತ್ತಾರೆ. ಈ ವಿಷಯದಲ್ಲಿ ನಮ್ಮ ಕೃಷಿ ವಿಶ್ವವಿದ್ಯಾನಿಲಯದ ಸಾಧನೆ ಮೆಚ್ಚುವಂಥದ್ದಾಗಿದೆ.

ಈಗ ಪ್ರಕಟವಾಗುತ್ತಿರುವ **ಅರಣ್ಯಶಾಸ್ತ್ರ ಪಾರಿಭಾಷಿಕ ಶಬ್ದಕೋಶ** ಪುಸ್ತಕ ಎಲ್ಲ ವಿದ್ಯಾರ್ಥಿಗಳು, ಬೋಧಕರು, ವಿಜ್ಞಾನಿಗಳು ಮತ್ತು ಇತರ ಆಸಕ್ತರಿಗೆ ಉಪಯುಕ್ತವಾಗುವುದೆಂದು ಆಶಿಸುತ್ತೇನೆ.

ಜೆ.ಕೆ. ವೀರೇಶ್,
ಕುಲಪತಿಗಳು

ಗಾಂಧಿ ಕೃಷಿ ವಿಜ್ಞಾನ ಕೇಂದ್ರ
ಕೃಷಿ ವಿಶ್ವವಿದ್ಯಾನಿಲಯ
ಬೆಂಗಳೂರು - 560065.

ಸಂಪಾದಕರ ಮಾತು

ಇದು ವಿಜ್ಞಾನಯುಗ, ಎಲ್ಲ ಕೆಲಸಕಾರ್ಯಗಳು ವಿಜ್ಞಾನದ ತಳಹದಿಯ ಮೇಲೆ ಜರುಗುತ್ತಿವೆ. ವಿಜ್ಞಾನದ ವಿವಿಧ ಮುಖಗಳ ಪರಿಚಯ, ವಿವರಗಳೆಲ್ಲ ಬಹುವಾಗಿ ಆಂಗ್ಲಭಾಷೆಯಲ್ಲಿರುವುದು ಸರ್ವವಿದಿತ. ಅಲ್ಲಿರುವ ವಿವಿಧ ವಿಶಿಷ್ಟ ತಾಂತ್ರಿಕ ಪದಗಳು ವಿಶ್ವದ ಇತರೆಲ್ಲ ದೇಶಗಳ ದೇಶೀಯ, ಪ್ರಾದೇಶಿಕ ಭಾಷೆಗಳಲ್ಲಿ ಜನತೆಗೆ ಸುಲಭವಾಗಿ ವೇದ್ಯವಾಗುವಂತೆ ದೊರೆಯಬೇಕಾಗುತ್ತದೆ. ಆಗಲೇ ಆ ಎಲ್ಲ ವಿಷಯಗಳನ್ನು ಸಾಮಾನ್ಯ ಜನತೆಗೆ, ಅನುವಾದಕರಿಗೆ ತಿಳಿಸಿ ಹೇಳಲು, ಭಾಷಾಂತರಿಸಲು ಸುಲಭವಾಗುತ್ತದೆ.

ಕನ್ನಡದಲ್ಲಿ ಕೃಷಿ ವಿಜ್ಞಾನ ಸಾಹಿತ್ಯ ರಚನೆ ಕೈಗೊಂಡಿರುವ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಕೃಷಿ ವಿಜ್ಞಾನದ ವಿವಿಧಶಾಸ್ತ್ರ ವಿಭಾಗಗಳಲ್ಲೂ ಪಾರಿಭಾಷಿಕ ಶಬ್ದಕೋಶ ರಚಿಸಬೇಕೆಂದು ಕಾರ್ಯಕ್ರಮ ಹಾಕಿಕೊಂಡಿದ್ದು, ಆ ದಿಸೆಯಲ್ಲಿ ಇದೊಂದು ಯತ್ನವಾಗಿದೆ.

ಪಾರಿಭಾಷಿಕ ಶಬ್ದಗಳ ರಚನೆಯಲ್ಲಿ ಕೆಲವು ಉಪಕ್ರಮಗಳನ್ನು ಹಾಕಿಕೊಳ್ಳಲಾಗಿದೆ. ಅವುಗಳಲ್ಲಿ ಕೆಳಗಿನವು ಮುಖ್ಯವಾಗಿವೆ :

1. ಈಗಾಗಲೇ ಬಳಕೆಯಲ್ಲಿರುವ ಇಂಗ್ಲಿಷ್‌ನಲ್ಲಿಯ ಪದಗಳನ್ನು ಇದ್ದಕ್ಕಿದ್ದಂತೆ ಕನ್ನಡದಲ್ಲಿ ಬಳಸಿಕೊಳ್ಳುವುದು.

   ಇದು ಅವಶ್ಯಕವಷ್ಟೇ ಅಲ್ಲ, ವ್ಯಾವಹಾರಿಕವೂ ಹೌದು. ಒಂದು ರೀತಿಯಲ್ಲಿ ಅವು ಇಂಗ್ಲಿಷ್ ಶಬ್ದಗಳಷ್ಟೇ ಅಲ್ಲ, ಅಂತರರಾಷ್ಟ್ರೀಯ ವಿಜ್ಞಾನ ಶಬ್ದಗಳು. ವಿವಿಧ ಭಾಷೆಗಳಿಂದ ಬಂದು ಇಂಗ್ಲಿಷ್ ಭಾಷೆಯಲ್ಲಿ ಸೇರಿಕೊಂಡಿವೆ. ಹಾಗೆ ಮಾಡುವುದರಿಂದ ನಮ್ಮ ವೈಜ್ಞಾನಿಕ ಶಬ್ದ ಸಂಪತ್ತು ಬೆಳೆಯುತ್ತದೆ.

2. ಬಹುತೇಕ ತಾಂತ್ರಿಕ ಶಬ್ದಗಳಿಗೆ ಸಂಸ್ಕೃತ ಶಬ್ದಗಳನ್ನು ಬಳಸುವುದು. ಸಂಸ್ಕೃತ ಅನೇಕ ಭಾರತೀಯ ಭಾಷೆಗಳಿಗೆ ಮಾತೃಸ್ಥಾನದಲ್ಲಿದೆ. ಅನೇಕ ಭಾರತೀಯ ಭಾಷೆಗಳವರು ಸಂಸ್ಕೃತ ಶಬ್ದಗಳನ್ನೇ ಹೆಚ್ಚಾಗಿ ಬಳಸಿಕೊಂಡಿದ್ದಾರೆ. ನಮ್ಮ ನುಡಿಯ ಮೂಲ ಸಂಸ್ಕೃತವಾಗಿರದಿದ್ದರೂ ಅದು ಸಾಕುತಾಯಿ. ಸಾಕುತಾಯಿಯ ಪ್ರಭಾವವೇ ಹೆಚ್ಚಿ ಕನ್ನಡ ಸಂಸ್ಕೃತಮಯವಾಗಿದೆ.

3. ಕನ್ನಡ ಶಬ್ದಗಳು ದೊರೆಯುತ್ತಿರುವಲ್ಲಿ ಅವುಗಳನ್ನು ತೆಗೆದುಕೊಳ್ಳುವುದು.

4. ಭಾರತ ಸರ್ಕಾರ ಸೂಚಿಸಿದ ಪದಗಳಲ್ಲಿ ಉಚಿತವಾದವುಗಳನ್ನು ಆಯ್ಕೆ ಮಾಡಿಕೊಳ್ಳುವುದು.

ಈಗಾಗಲೇ ಭಾರತ ಸರ್ಕಾರವು ಎಲ್ಲ ವಿಷಯಗಳ ತಾಂತ್ರಿಕ ಶಬ್ದಗಳಿಗೆ ಸಮಾನ ಪದಗಳನ್ನು ಹಿಂದಿಯಲ್ಲಿ ಗುರುತಿಸಿ, ಹಲವಾರು ಪಾರಿಭಾಷಿಕ ಶಬ್ದಕೋಶಗಳನ್ನು ಪ್ರಕಟಿಸಿದೆ.

ಈ ಪಾರಿಭಾಷಿಕ ಶಬ್ದಕೋಶ ರಚನೆಯಲ್ಲಿ ಮೇಲಿನ ನಾಲ್ಕೂ ಮಾರ್ಗದರ್ಶನ ಸೂತ್ರಗಳನ್ನು ಅನುಸರಿಸಲಾಗಿದೆ. ಮೊದಲನೆಯ ಸೂತ್ರದನ್ವಯ ಕೇವಲ ಲಿಪ್ಯಂತರವಿರುವುದರಿಂದ ಅಂಥ ಶಬ್ದಗಳು ಇದರಲ್ಲಿ ಒಳಸೇರಿಲ್ಲ.

ಅರಣ್ಯ ಶಾಸ್ತ್ರಕ್ಕೆ ಸಂಬಂಧಿಸಿದ ಸಕಲ ಶಬ್ದಗಳೂ ಇದರಲ್ಲಿ ಸಮಾವೇಶಗೊಂಡಿವೆ ಎಂದಲ್ಲ. ಸಾಧ್ಯವಿದ್ದಷ್ಟು ಶಬ್ದಗಳು ಸೇರಿಸಲಾಗಿದೆ. ಇದರಲ್ಲಿ ಇತರ ಶಾಸ್ತ್ರಗಳಿಗೂ ಸಂಬಂಧಿಸಿದ ಅನೇಕ ಸಾಮಾನ್ಯ ಶಬ್ದಗಳನ್ನು ಸಹಜವಾಗಿಯೇ ಸೇರ್ಪಡೆಯಾಗಿವೆ. ಏಕೆಂದರೆ, ವಿವಿಧ ಶಾಸ್ತ್ರಗಳಲ್ಲಿ ಬಳಕೆಯಾಗುವ ಕೆಲವು ಸಾಮಾನ್ಯ ಶಬ್ದಗಳ ನಡುವೆ 'ಇದಮಿತ್ಥಂ' ಎಂದು ಗೆರೆ ಎಳೆಯುವುದು ಸಾಧ್ಯವಾಗದ ಮಾತು.

ಈ ಪುಸ್ತಕವನ್ನು ಅರಣ್ಯಶಾಸ್ತ್ರ ವಿಭಾಗದ ಡಾ. ಭಾಸ್ಕರ್ ಹಾಗೂ ಕನ್ನಡ ವಿಭಾಗದ ಶ್ರೀ ಎಚ್. ಕೆ. ನರಸಿಂಹೇಗೌಡ ಮತ್ತು ಶ್ರೀಮತಿ ಸಿ. ಕೆ. ಕುಮುದಿನಿ ಅವರುಗಳನ್ನೊಳಗೊಂಡ ಸಮಿತಿಯು ತಾಂತ್ರಿಕವಾಗಿ ಪರಿಶೀಲಿಸಿದೆ. ವಿಭಾಗದ ಬೆರಳಚ್ಚುಗಾರರಾದ ಶ್ರೀ ಎಲ್. ಆರ್. ದೊಡ್ಡರಂಗಯ್ಯ ಸ್ವಚ್ಛಪ್ರತಿ ತಯಾರಿಕೆಯಲ್ಲಿ, ವಿಭಾಗದ ಕರಡೋದುಗಾರರಾದ ಶ್ರೀ ಎಂ. ರಮೇಶ್ ಅವರು ಕರಡೋದುವಿಕೆಯಲ್ಲಿ ಸಹಕರಿಸಿದ್ದಾರೆ.

ಈ ಶಬ್ದಕೋಶ ಅರಣ್ಯಶಾಸ್ತ್ರದ ಬಗೆಗಿನ ಕನ್ನಡ ಪುಸ್ತಕ ಓದುವವರಿಗೂ ಗ್ರಂಥ ರಚನೆ ಮಾಡುವವರಿಗೂ ಅನುವಾದಕರಿಗೂ ಇತರ ಆಸಕ್ತರಿಗೂ ಉಪಯುಕ್ತವಾಗುವುದೆಂದು ಆಶಿಸಲಾಗಿದೆ.

ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ
ಬೆಂಗಳೂರು - 560 024

ಎಚ್. ಕೆ. ನರಸಿಂಹೇಗೌಡ
ಕನ್ನಡ ಪ್ರಾಧ್ಯಾಪಕರು
ಹಾಗೂ
ಕನ್ನಡ ಅಭಿವೃದ್ಧಿ ಸಮಿತಿ ಕಾರ್ಯದರ್ಶಿಗಳು

ಅರಣ್ಯಶಾಸ್ತ್ರ ಪಾರಿಭಾಷಿಕ ಶಬ್ದಕೋಶ

A

Abatement	ಕಡಮೆಯಾಗುವಿಕೆ
Abiotic	ಅಜೈವಿಕ
Abnormal forest	ಅಸ್ವಾಭಾವಿಕ ಕಾಡು
Aboriginal	ಆದಿವಾಸಿ, ಮೂಲನಿವಾಸಿ
Abortive	ಗೊಡ್ಡು, ಬಂಜೆ, ಪೂರ್ಣ ಬೆಳೆಯದ
Abrading tool	ಘರ್ಷಕ ಸಲಕರಣೆ
Abration	ಉಜ್ಜು,ತರಚು/ಗಾಯ
Absolute	1.ಪರಿಶುದ್ಧ, ಪರಿಪೂರ್ಣ, ಪರಮ 2.ನಿರಪೇಕ್ಷ, ಕೇವಲ
Absolute form quotient	ನಿರಪೇಕ್ಷ ಆಕೃತಿಭಾಗಲಬ್ಧ
Absolute humidity	ನಿರಪೇಕ್ಷ ಆರ್ದತೆ
Absorption	ಹೀರಿಕೆ, ಅವಶೋಷಣ
Absorption, gross	ಒಟ್ಟು ಹೀರಿಕೆ,
Absorption, initial	ಪ್ರಾರಂಭಿಕ ಹೀರಿಕೆ/ಅವಶೋಷಣ
Absorption, net	ನಿವ್ವಳ ಹೀರಿಕೆ/ಅವಶೋಷಣ
Accelerated erosion	ವೇಗೋತ್ಕರ್ಷಿತ ಕೊಚ್ಚಣೆ, ತ್ವರಿತಗತಿಯ ಸವಕಳಿ
Accelerated test	ವೇಗೋತ್ಕರ್ಷಿತ/ತ್ವರಿತಗತಿಯ ಪರೀಕ್ಷೆ
Access	ಪ್ರವೇಶ, ಮಾರ್ಗ, ಸಿಗುವುದು
Access, bilateral	ದ್ವಿಪಾರ್ಶ್ವಿಕ ಪ್ರವೇಶ, ಇಬ್ಬದಿ ಪ್ರವೇಶ, ಇಬ್ಬದಿ ಸಿಗುವ
Access, rood	ಕಾಲು ಎಕರೆಯಷ್ಟು ಲಭ್ಯ ಪ್ರವೇಶ
Accessary system	ಸಹಾಯಕ/ಅನುಷಂಗಿಕ ಪದ್ಧತಿ
Accessibility	ಪ್ರವೇಶಸಾಧ್ಯತೆ, ಸಿಗುವಿಕೆ, ಮಾರ್ಗವಿರುವಿಕೆ
Accessible forest	ಪ್ರವೇಶಸಾಧ್ಯವನ, ಮಾರ್ಗವಿರುವ ಕಾಡು
Accessory species	ಅನುಷಂಗಿಕ ಪ್ರಭೇದ, ಗೌಣ ಪ್ರಭೇದ, ಜೊತೆಗಿನ ಪ್ರಭೇದ
Acclimatization	ಒಗ್ಗಿಕೊಳ್ಳುವಿಕೆ, ಹೊಂದಿಕೊಳ್ಳುವಿಕೆ
Accretion	ವೃದ್ಧಿ, ಅಭಿವೃದ್ಧಿ
Accuracy	ಯಥಾರ್ಥತೆ, ನಿಷ್ಕೃಷ್ಟತೆ
Achene	ಓಕಬೀಜವುಳ್ಳ ಸಿಡಿಯುವ ಕಾಯಿ
Acid	ಆಮ್ಲ
Acid, rosin	ರೋಸಿನ್ ಆಮ್ಲ, ಗಂಧರಾಲಆಮ್ಲ, ಕರ್ಪೂರರಾಳ ಆಮ್ಲ
Acid soil	ಆಮ್ಲ ಮಣ್ಣು
Acidity	ಆಮ್ಲತೆ

Acidity, potential	ಅಂತಸ್ಥ ಆಮ್ಲತೆ
Acidity effect	ಆಮ್ಲತ್ವ ಪ್ರಭಾವ
Aconite	ವತ್ಸನಾಭಿ ಸಸ್ಯ(ವಿಷಕಾರಕ)
Acquired character	ಆರ್ಜಿತಗುಣ, ಆರ್ಜಿತ/ಸಂಪಾದಿತ ಲಕ್ಷಣ
Acquired immunity	ಆರ್ಜಿತ ಪ್ರತಿರೋಧಕತೆ/ನಿರೋಧಶಕ್ತಿ
Acrid	ಕಟು, ತೀಕ್ಷ್ಣ
Act	ಅಧಿನಿಯಮ
Actinomorphic	ತ್ರಿಜ್ಯಸಮಭಾಗಿ
Action, buffer	1.ಕಾಪುತಡೆ ಕ್ರಿಯೆ, 2.ಉಭಯ ಪ್ರತಿರೋಧಕ ಕ್ರಿಯೆ
Actual breaking strength	ವಾಸ್ತವಿಕ ಒಡೆಯುವ ಬಲ/ ವಿಭಜನಸಾಮರ್ಥ್ಯ
Adhesion, mechanical	ಯಾಂತ್ರಿಕ ಸಂಸಕ್ತಿ/ಅಂಟಿಕೊಳ್ಳುವಿಕೆ
Adhesive	ಸಂಸಕ್ತಕ, ಅಂಟಿಕೊಳ್ಳುವ
Adhesive pad	ಅಂಟಿಕೊಳ್ಳುವ ಮೆತ್ತೆ
Adhesive solution	ಸಂಸಕ್ತ/ಅಂಟಿಕೊಳ್ಳುವ ದ್ರಾವಣ
Administration, forest	ವನ್ಯಾಡಳಿತ, ಅರಣ್ಯ ಆಡಳಿತ
Adnate	ಸಂಸಕ್ತ, ಅಂಟಿಕೊಂಡು ಬೆಳೆಯುವ
Adsorption	ಅಧಿಶೋಷಣೆ, ಮೇಲ್ಮೈ ಮಂದಗಟ್ಟುವಿಕೆ
Adult	ವಯಸ್ಕ, ಪ್ರೌಢ, ಬಲಿತ
Advance felling	ಮುಂದಾಗಿ (ಮರ) ಕಡಿಯುವಿಕೆ
Advance growth	ಮುಂದಾಗಿ ಬೆಳೆಯುವಿಕೆ, ಮುಂದಾಗಿ ಬೆಳೆದ, ಮುಂಚೆಯೇ ಬೆಳೆದುನಿಂತಿರುವ
Advance planting	ಮುಂದಾಗಿ ನೆಡುವಿಕೆ
Advance reproduction	ಮುಂದಾಗಿ ಸಂತಾನೋತ್ಪತ್ತಿ
Advance thinning	ಮುಂದಾಗಿ ತೆಳುವು ಮಾಡುವಿಕೆ
Adventitious bud	ಆಗಂತುಕ ಮೊಗ್ಗು
Adventitious root	ಆಗಂತುಕ ಬೇರು
Adze	ಬಾಚಿ
Adzing	ಬಾಚಿಯಿಂದ ಕೆತ್ತುವಿಕೆ
Adzing machine	ಬಾಚಿಯಿಂದ ಕೆತ್ತುವ ಯಂತ್ರ
Aeolion soil	ಗಾಳಿಸಾಗಿತ ಮಣ್ಣು
Aeration	ಗಾಳಿಯಾಡುವಿಕೆ
Aeration soil	ಮಣ್ಣಿನಲ್ಲಿ ಗಾಳಿಯಾಡುವಿಕೆ

Aerial	ವಾಯುವೀಯ, ಅಂತರಿಕ್ಷದ, ಆಕಾಶೀ
Aerial root	ಬಿಳಲು ಬೇರು
Aerial strip census	ಆಕಾಶೀ/ಅಂತರಿಕ್ಷ ಪಟ್ಟಿ ಗಣತಿ
Aerobic	ಅಮ್ಲಜನಕಾಪೇಕ್ಷಿ
Aesthetic	ಸೌಂದರ್ಯಾತ್ಮಕ
Aesthetic forestry	ಸೌಂದರ್ಯಾಭಿವೃದ್ಧಿ ಉದ್ದೇಶಿತ ಅರಣ್ಯ, ಸೌಂದರ್ಯವರ್ಧಕ ಅರಣ್ಯ
Aestivation	1. ಪುಷ್ಪದಳ/ಮುಕುಳದಳ ವಿನ್ಯಾಸ 2. ಗ್ರೀಷ್ಮ ನಿಶ್ಚೇಷ್ಟತೆ
Afforestation	ಹೊಸ ಅರಣ್ಯ ನಿರ್ಮಾಣ
Afforest	ಹೊಸ ಕಾಡು ಬೆಳೆಸು
African Calabash Tree	ಆನೆಹುಣಿಸೆ, ಬ್ರಹ್ಮಾಮ್ಲಿಕ, ಮಗಿಮಾವು,
African Marygold	ಚೆಂಡುಮಲ್ಲಿಗೆ, ಸೀಮೆ ಶ್ಯಾವಂತಿ
After ripening	ಪಕ್ವವಾದನಂತರ
Agar oil	ಅಗರ್ ಎಣ್ಣೆ, ಅಗರ್ ತೈಲ
Agave	ಭೂತಾಳೆ
Age class	ವಯೋವರ್ಗ
Age class distribution, normal	ಸಾಮಾನ್ಯ ವಯೋವರ್ಗ ವಿತರಣೆ
Age classification	ವಯೋವರ್ಗೀಕರಣ
Age class period	ವಯೋವರ್ಗ ಅವಧಿ
Aged, even	ಸಮ ವಯಸ್ಸಿನ
Aged, uneven	ಅಸಮ ವಯಸ್ಸಿನ,
Age, exploitable	ಶೋಷಕ ವಯಸ್ಸು, ವಿನಿಯೋಗದ ವಯಸ್ಸು, ಬಳಕೆಗೆ ಯೋಗ್ಯವಾದ, ಅನುರೂಪವಾದ ವಯಸ್ಸು
Age gradation	ವಯೋಶ್ರೇಣೀಕರಣ, ವಯೋವರ್ಗೀಕರಣ
Age, mean	ಸರಾಸರಿ ವಯಸ್ಸು
Age, predominant	ಪ್ರಧಾನವಾದಂತಹ ವಯಸ್ಸು
Age, rotation	ಆವರ್ತನ ವಯಸ್ಸು
Age, top	ಮೇಲ್ವಯಸ್ಸು
Ageing	1. ಹದಗೊಳಿಸಿಕೆ 2. ವಯಸ್ಸಾಗುವಿಕೆ
Age of wood	ದಾರುವಿನ ವಯಸ್ಸು
Agenda	ಕಾರ್ಯಸೂಚಿ
Aggregate, soil	ಮಣ್ಣು ಸಮಷ್ಟಿ, ಒಟ್ಟುಗೂಡಿದ ಮಣ್ಣು

Aggregate breaking strength	ಸಮಷ್ಟಿಗಳ ಒಡೆಯುವ ಬಲ
Aggregate fruit	ಸಮಷ್ಟಿತ ಫಲ, ಒಟ್ಟುಗೂಡಿದ ಫಲ
Aggregation	ಒಟ್ಟುಗೂಡುವಿಕೆ, ಸಮಷ್ಟಿ
Agglomeration	ಗುಂಪು ಕೂಡುವಿಕೆ
Agnatha	ಹಾಗ್ ಮೀನು
Agroforestry	ಕೃಷಿ ಅರಣ್ಯಶಾಸ್ತ್ರ
Agroforest	ಕೃಷಿ ಅರಣ್ಯ
Agri-silvi-method	ಕೃಷಿ ಅರಣ್ಯ ಪದ್ಧತಿ
Air craft grade timber	ವಿಮಾನೋಪಯೋಗಿ ಮರಮುಟ್ಟು, ವಿಮಾನೋಪಯೋಗಿ ವರ್ಗದ ದಾರು
Air, dry	ಶುಷ್ಕವಾಯು, ಒಣಗಾಳಿ
Air, saturated	ಸಂತೃಪ್ತ ವಾಯು/ಗಾಳಿ
Air, soil	ಮಣ್ಣಿನಲ್ಲಿನ ಗಾಳಿ/ಹವೆ
Air dried	ಗಾಳಿಯಲ್ಲಿ ಒಣಗಿದ, ಹವೆಯಲ್ಲಿ ಒಣಗಿಸಿದ
Air dry density	ವಾಯುಶುಷ್ಕ ಸಾಂದ್ರತೆ, ಗಾಳಿಯಲ್ಲಿ ಒಣಗಿದ ಸಾಂದ್ರತೆ
Air drying	ವಾಯು ಶುಷ್ಕನ, ಗಾಳಿಯಲ್ಲಿ ಒಣಗಿಸುವಿಕೆ
Air dry moisture content	ವಾಯುಶುಷ್ಕ ಆರ್ದ್ರತಾಂಶ, ವಾಯುಶುಷ್ಕ ತೇವಾಂಶ, ಗಾಳಿಯಲ್ಲಿ ಒಣಗಿದ ತೇವಾಂಶ
Air seasoning	ವಾಯುಸಂಶೋಷಣೆ, ಗಾಳಿಯಲ್ಲಿ ಹದಗೊಳಿಸುವಿಕೆ
Air seasoning shed	ವಾಯುಸಂಶೋಷಣೆಮಳಿಗೆ ಗಾಳಿಯಲ್ಲಿ ಹದಗೊಳಿಸುವ ಮಳಿಗೆ
Albinism	ರಂಜಕಹೀನತೆ, ಬಿಳಿಚಿಕೊಳ್ಳುವಿಕೆ
Albino	ಶ್ವೇತವರ್ಣೀಯ, ಹರಿದ್ವಿಹೀನಸಸ್ಯ
Alburnum	ರಸದಾರು, ಬಿಳಿದಾರು (ಚೇಗಿನ ಹೊರಗಿನ ಬಿಳಿಭಾಗ)
Alignment	ಸಾಲುನೆಲೆ, ಸಾಲುನಿಲವು, ಸಾಲು ಸಮಮಾಡುವಿಕೆ
Alkaline soil	ಕ್ಷಾರೀಯ ಮಣ್ಣು
Alkalinity	ಕ್ಷಾರೀಯತೆ, ಕ್ಷಾರತ್ವ
Alkali soil	ಕ್ಷಾರ ಮಣ್ಣು
Alkalization	ಕ್ಷಾರೀಕರಣ
All aged	ಎಲ್ಲಾ ವಯಸ್ಸಿನ
Allelopathy	ಒಂದು ಗಿಡ ಇನ್ನೊಂದು ಗಿಡಕ್ಕೆ ಮಾಡುವ ರಾಸಾಯನಿಕ ಹಾನಿ
Allogenic factor	ಅನ್ಯಜಾತ ಅಂಶ
Allogenic succession	ಅನ್ಯಜಾತ ಅನುಕ್ರಮಣ

Allotment to periods (periodic block)	ಅವಧಿ ಹಂಚಿಕೆ
Allowable cut	ಅಂಗೀಕರಿಸಬಹುದಾದ/ಅಂಗೀಕಾರಾರ್ಹ ಕಡಿಯುವಿಕೆ, ಅಂಗೀಕರಿಸಬಹುದಾದಷ್ಟು ಕಡಿಯುವುದು
Allowance	ಸೋಡಿ, ರಿಯಾಯಿತಿ
Allowance for bark	ತೊಗಟೆಗಾಗಿ ಸೋಡಿ/ರಿಯಾಯಿತಿ
Allowance for trim	ಕತ್ತರಿಸುವಿಕೆಗೆ/ಸವರಿಕೆಗೆ ರಿಯಾಯಿತಿ
Alluvial soil	ಮೆಕ್ಕಲು/ರೇವೆಮಣ್ಣು
All veneer construction	ಸಂಪೂರ್ಣದಾರು ತೆಳುಹೊದಿಕೆ ರಚನೆ, ಎಲ್ಲವನ್ನು ಮರದ ಹಾಳೆಯಿಂದ ರಚಿಸಿದ್ದು
Alpine (vegetation)	ಪರ್ವತೀಯ (ಸಸ್ಯವರ್ಗ)
Alternate host	ಪರ್ಯಾಯ ಆತಿಥೇಯ
Alternate strip system	ಪರ್ಯಾಯ ಪಟ್ಟೆ ಪದ್ಧತಿ
Altitude	ಔನ್ನತ್ಯ, ಸಮುದ್ರಮಟ್ಟದಿಂದ ಇರುವ ಎತ್ತರ
Amber	ಶಿಲಾರಾಳ, ತೈಲಸ್ಫಟಿಕ
Amenity	ಜೀವನಸೌಕರ್ಯ, ವಾಸದ ಸೌಕರ್ಯ
American aloe	ಆನೆಕತ್ತಾಳೆ, ರಾಕ್ಷಸ ಬಾಳೆ, ಕಲ್ನಾರುದೆವ್ವ ಬಾಳೆ
Ammunition	ಮದ್ದು, ಗುಂಡು
Amorphous region	ಅನಿಯತ ರೂಪೀಕ್ಷೇತ್ರ, ರೂಪರಹಿತ ಕ್ಷೇತ್ರ
Anabatic wind	ಊಧ್ವಮುಖವಾತ, ಆರೋಹೀ ಗಾಳಿ
Anaerobe	ಆಮ್ಲಜನಕನಿರಪೇಕ್ಷಿ
Anaerobic respiration	ಆಮ್ಲಜನಕ ನಿರಪೇಕ್ಷಿ ಉಸಿರಾಟ, ಆಮ್ಲಜನಕರಹಿತ ಉಸಿರಾಟ
Analysis, stem	ಕಾಂಡ ವಿಶ್ಲೇಷಣೆ
Analysis, stump	ಕಡಿದ ಮರದ ಬುಡದ ವಿಶ್ಲೇಷಣೆ, ಮರದ ಮೋಟು ವಿಶ್ಲೇಷಣೆ
Anchorage cable	ಲಂಗರು ಹಗ್ಗ, ಲಂಗರು ತಂತಿ/ಕಂಬಿ
Androecium	ಕೇಸರ ಮಂಡಲ, ಪುಂಕೇಸರ
Anemograph	ವಾಯುಗತಿ (ರೇಖ)ಮಾಪನ, ಗಾಳಿ ವೇಗರೇಖನ
Anemometer	ವಾಯುಗತಿ ಮಾಪಕ, ಪವನ/ಗಾಳಿ ವೇಗಮಾಪಕ
Anemophilous plant	ವಾಯುಪರಾಗಿತ ಸಸ್ಯ
Angiosperm	ಆವೃತ ಬೀಜಸಸ್ಯ
Angle, fleet	ಸಂಚಾರೀ ಕೋನ
Angle, grinding	ಘರ್ಷಣ/ಅರೆಯುವ ಕೋನ

Angle, sharpness	ಹರಿತ ಕೋನ
Angle of attack	ಮೇಲೆರಗುವ ಕೋನ
Animal dye	ಪ್ರಾಣಿಜನ್ಯ ಬಣ್ಣ
Animal glue	ಪ್ರಾಣಿಜನ್ಯ ಅಂಟು ಪದಾರ್ಥ
Animal introduction	1. ಪ್ರಾಣಿ ಪರಿಚಯ, 2. ಪ್ರಾಣಿ ಬಿಡುವಿಕೆ
Anise	ಕಾಡು ಸೋಂಪು
Annelida	ವಲಯವಂತ ಪ್ರಾಣಿ
Annual increment	ವಾರ್ಷಿಕ ವೃದ್ಧಿ
Annual charge	ವಾರ್ಷಿಕ ಖರ್ಚು/ವೆಚ್ಚ
Annual cut	ವಾರ್ಷಿಕ ಕಟಾವು/ಕೊಯ್ಲು
Annual layer	ವಾರ್ಷಿಕ ಪದರ/ಸ್ತರ
Annual ring	ವಾರ್ಷಿಕ ವಲಯ/ಉಂಗುರ,
Annulus	ವಲಯ, ಉಂಗುರ
Anormal	ಅಸಾಮಾನ್ಯ, ಅಸಾಧಾರಣ
Antelope	ಎರಳೆ, ಜಿಂಕೆ, ಚಿಗರಿ
Antenna	ಕುಡಿಮೀಸೆ
Anther	ಪರಾಗಕೋಶ
Anthrax	ನೆರಡಿರೋಗ
Anthropogenic factor	ಮಾನವಜನಿತ/ಮಾನವಜನ್ಯ ಅಂಶ
Anthropoid (ape)	ನರವಾನರ
Anthropoidea	ಪ್ರಾಮುಖಿಗಳ ಒಳವರ್ಗ
Anthropomorphism	ಮಾನವೀಕರಣ, ಮಾನವ ರೂಪೀಕರಣ
Antibiotic	ಪ್ರತಿಜೈವಿಕ, ಜೀವಾಣು ನಿರೋಧಕ
Antiseptic	ಪೂತಿನಾಶಕ
Anti shrinkage	ಪ್ರತಿ ಸಂಕೋಚನ, ಸಂಕೋಚನ ಪ್ರತಿರೋಧಕ
Antishrinkage treatment	ಸಂಕೋಚನ ನಿರೋಧಕ ಚಿಕಿತ್ಸೆ, ಪ್ರತಿಸಂಕೋಚನ ಉಪಚಾರ
Antisplitting composition	ಸೀಳುವಿರೋಧೀ ರಚನೆ
Antler	ಉದುರುಗೊಂಬು
Antproof course	ಇರುವೆ ನಿರೋಧಕ ಲೇಪನ
Apetalous	ದಳರಹಿತ
Aphid	ಗಿಡಹೇನು, ಹಸುರು ಹೇನು
Apical	ತುದಿಯ, ಅಗ್ರದ

Apiculture	ಜೇನುಸಾಕಣೆ
Apocarpous ovary	ವಿಭಕ್ತ ಅಂಡಾಶಯ, ಬಿಡಿ ಅಂಡಾಶಯ
Apogamous	ಲಿಂಗಾಣುರಹಿತ
Apparent density (Bulk density)	ತೋರಿಕೆ ಸಾಂದ್ರತೆ (ಗಾತ್ರ ಸಾಂದ್ರತೆ)
Appendage	ಉಪಾಂಗ
Appendix	1. ಪರಿಶಿಷ್ಟ, 2. ಕರುಳು ತುದಿ, ತುದಿಗರುಳು
Applied Botany	ಅನ್ವಯಿಕ ಸಸ್ಯಶಾಸ್ತ್ರ
Applied Ecology	ಅನ್ವಯಿಕ ಪರಿಸರಶಾಸ್ತ್ರ
Aquatic plant	ಜಲಸಸ್ಯ
Arable land	ಕೃಷಿ ಯೋಗ್ಯ ಭೂಮಿ
Arboretum	ವೃಕ್ಷೋದ್ಯಾನ, ವೃಕ್ಷವಾಟಿ
Arboriculture	ವೃಕ್ಷಸಂವರ್ಧನೆ, ವೃಕ್ಷ ವ್ಯವಸಾಯ
Arch logging	ಕಮಾನಿನಾಕಾರದ ದಿಮ್ಮಿ ಕಡಿಯುವಿಕೆ
Area, control	ಹತೋಟಿ ಪ್ರದೇಶ/ಕ್ಷೇತ್ರ
Area, drainage	ಬಸಿಗಾಲುವೆ/ಚರಂಡಿ ಪ್ರದೇಶ
Area method	ಕ್ಷೇತ್ರ ವಿಧಾನ
Area, regeneration	ಪುನರುತ್ಪತ್ತಿ ಕ್ಷೇತ್ರ
Area, working plan	ಕಾರ್ಯಯೋಜನೆ ಕ್ಷೇತ್ರ
Arenaceous	ಮರಳಿನ
Argillaceous	ಜೇಡಿಯಿಂದ ಕೂಡಿದ
Arid (dry) zone	ಶುಷ್ಕವಲಯ
Aril	ಬೀಜಪುಚ್ಛ
Aromatic	ಸುಗಂಧಯುಕ್ತ
Arrangement	1. ವ್ಯವಸ್ಥೆ, 2. ವಿನ್ಯಾಸ/ಜೋಡಣೆ
Arrangement, randomized	ಅವ್ಯವಸ್ಥಿತ/ಯಾದೃಚ್ಛಿಕ ಜೋಡಣೆ
Arthropoda	ಸಂಧಿಪದಿಗಳು
Artificial regeneration	ಕೃತಕ ಪುನರುತ್ಪಾದನೆ
Artificial reproduction	ಕೃತಕ ಸಂತಾನೋತ್ಪಾದನೆ
Artiodactyls	ಸಮಗೊರಸಿನ ಪ್ರಾಣಿಗಳು
Asexual reproduction	ಅಲೈಂಗಿಕ/ನಿರ್ಲಿಂಗ ಸಂತಾನೋತ್ಪತ್ತಿ
Asphalt	ಕಲ್ಲರಗು
Assimilation	ದೇಹಗತಮಾಡಿಕೊಳ್ಳುವಿಕೆ, ಜೀರ್ಣಸಿಕೊಳ್ಳುವಿಕೆ

Assistant Silviculturist, Experimental	ಸಹಾಯಕ ಅರಣ್ಯ ಕೃಷಿ ತಜ್ಞ ಪ್ರಾಯೋಗಿಕ
Assistant Silviculturist, Statistical	ಸಹಾಯಕ ಅರಣ್ಯ ಕೃಷಿ ತಜ್ಞ, ಸಂಖ್ಯಾಶಾಸ್ತ್ರ
Association, ecology	ಜೀವಿಪರಿಸರಶಾಸ್ತ್ರ ಸಂಘ
Association, plant	1. ಸಸ್ಯ ಸಂಘ, 2. ಸಹವಾಸಿ ಸಸ್ಯ
Assortment	ವಿಂಗಡಣೆ
Asymmetric	ಅಸಮರೂಪ
Atmometer	ಬಾಷ್ಪಮಾಪಕ
Auger, soil	ಮಣ್ಣುಬೈರಿಗೆ
Auto ecology	ಸ್ವಜೀವಿಪರಿಸರಶಾಸ್ತ್ರ
Autogenic	ಸ್ವಜನಿತ, ಸ್ವಜಾತ
Autogenic factor	ಸ್ವಜಾತೀಯ ಅಂಶ
Autogenic succession	ಸ್ವಜಾತೀಯ ಅನುಕ್ರಮಣ
Autometer	ಸ್ವಯಂಚಾಲಿತ ಮಾಪನ
Autotrophic habit	ಸ್ವಪೋಷಿತ ಸ್ವಭಾವ
Autotrophic plant	ಸ್ವಪೋಷಕೀಯ ಸಸ್ಯ, ಸ್ವಪೋಷಿ ಸಸ್ಯ
Autumn wood	ಶರತ್ಕಾಲದ ದಾರು
Auxiliary species	ಸಹಾಯಕ ಪ್ರಭೇದಗಳು
Aves	ಪಕ್ಷಿವರ್ಗ
Axe	ಕೊಡಲಿ
Axil	ಕಂಕುಳು, ಪತ್ರಕಕ್ಷ
Axle wood	ಗುಂಭಮರ
Azimuth	ದಿಗಂಶ
Azoic ear	ನಿರ್ಜೀವಕಲ್ಪ, ನಿರ್ಜೀವಪರ್ವ
Azonal	ವಲಯರಹಿತ

B

Babool tree	ಕರಿಬೇಲ, ಶಮಿ, ಕರಿಜಾಲಿ, ರಾಮಕಂಟೀ, ಕರಿಗೊಬ್ಬಳಿ
Back	ಪೀಠ, ಹಿಂಭಾಗ
Back Cross	ಹಿಮ್ಮುಖಸಂಕರಣ, ಹಿಂಸಂಕರಣ
Back cut	ಹಿಂಗತ್ತರಿಸುವಿಕೆ
Back sawn (flal swan)	ಸಮತಟ್ಟಾಗಿ ಕೊಯ್ದ ಹಲಗೆ

Back water (Lagoon)	ಹಿಮ್ಮೆಟ್ಟಿದ ನೀರು, ಹಿನ್ನುಗ್ಗಿದ ಸಮುದ್ರನೀರು
Bacterial nodules	ಬ್ಯಾಕ್ಟೀರಿಯಾ ಗಂಟುಗಳು
Bagasse	ಕಬ್ಬಿನ ಸಿಪ್ಪೆ
Bait	ಆಕರ್ಷಕ ಆಹಾರ
Balance of nature	ನೈಸರ್ಗಿಕ/ಪ್ರಾಕೃತಿಕ ಸಮತೋಲನ,
Balloon vine	ಜೋತಿಷ್ಮತ್ರಿ, ಮಿಂಚುಬಳ್ಳಿ, ಎರಂಬಳ್ಳಿ, ಬೆಕ್ಕಿನ ಬುಡ್ಡೆಗಿಡ
Ball planting	ಮಣ್ಣುಮುದ್ದೆ/ಹೆಪ್ಪು ಸಹಿತ ನೆಡುವಿಕೆ,
Bamboo	ಬೊಂಬು, ಬಿದಿರು
Band saw	ಪಟ್ಟೆಗರಗಸ
Banyan tree	ಆಲ, ನ್ಯಗ್ರೋಧ, ವಟವೃಕ್ಷ, ಗಿಳಿಕೆ ಮರ, ಹಾಲ
Baobab	ಬಹ್ವಾಮ್ಲಿಕ, ಆನೆ ಹುಣಿಸಿ, ಮಗಿಮಾವು
Barbadas cherry	ಸೀಮೆಅರೆನೆಲ್ಲಿ
Barge	ಹರಿಗೋಲು, ದೋಣಿ
Bark	ತೊಗಟೆ
Bark guage	ತೊಗಟೆ ದಪ್ಪವನ್ನು ಅಳತೆಮಾಡುವ ಉಪಕರಣ
Bark, over	ತೊಗಟೆ ಮೇಲಿನ
Bark scorch	ತೊಗಟೆ ತಾಪ
Bark, under	ತೊಗಟೆ ರಹಿತ, ತೊಗಟೆ ತೆಗೆದ
Barograph	ವಾಯುಭಾರಲೇಖಕ
Barometer	ವಾಯುಭಾರಮಾಪಕ
Barren	ಬರಡು, ಬಂಜರು
Basal area	ಎದೆಮಟ್ಟದ ಮರದ ವಿಸ್ತೀರ್ಣ
Basal area control	ಎದೆಎತ್ತರದ ತಳದ ಕ್ಷೇತ್ರ ನಿಯಂತ್ರಣ
Basalt	ಕಪ್ಪು, ಹಸುರು ಅಥವಾ ಕಂದು ಬಣ್ಣದ ಅಗ್ನಿಶಿಲೆ
Base	1. ಪ್ರತ್ಯಾಮ್ಲ 2. ಅಧಾರ, ತಳ, ಪೀಠ
Base exchange	ಪ್ರತ್ಯಾಮ್ಲ ವಿನಿಮಯ
Base exchange capacity	ಪ್ರತ್ಯಾಮ್ಲ ವಿನಿಮಯ ಸಾಮರ್ಥ್ಯ
Base line	ಆಧಾರ ರೇಖೆ, ತಳ ರೇಖೆ
Base status	1. ಪ್ರತ್ಯಾಮ್ಲ ಸ್ಥಿತಿ, 2. ಆಧಾರ ಸ್ಥಿತಿ
Basic density	ಒಣಗಿಸಿದ ಮರದ ತೂಕ ಮತ್ತು ಹಸಿಮರದ ಗಾತ್ರದ ಭಾಗಲಬ್ಧ
Basic logging	ಮರಕಡಿಯುವಿಕೆಯ ತಳಹದಿ
Basin listing	ತಗ್ಗುಪ್ರದೇಶಗಳ ಪಟ್ಟಿ ಮಾಡುವಿಕೆ

Basiphile	ಪ್ರತ್ಯಾಮ್ಲಪ್ರಿಯ, ಪ್ರತ್ಯಾಮ್ಲಾಪೇಕ್ಷಿ
Basket planting	ಬುಟ್ಟಿಯಲ್ಲಿ ನೆಡುವಿಕೆ
Bast	(ವೃಕ್ಷದ)ಒಳತೊಗಟೆ
Bastard Cedar	ಭದ್ರಾಕ್ಷಿ ಮರ, ಜೈನ್ ಮರ
Bastard Pepper	ಕಾಡುಅಮಟೆ ಕಾಯಿ, ಹುಚ್ಚು ಮೆಣಸು
Bastard Saffron	ಕುಸುಬೀಗಿಡ, ಕುಸುಮೇ ಕಾಳು, ಕುಸುಬೆ
Bastard Sandal (Red ceadar)	ದೇವದಾರಿ, ಗಂಧಗಿರಿ, ಕುರುವಾರು ಮರ, ಗ್ಯಾದಾರಿ, ಚುಂಬುಳು, ಕುಂಬಳಾಕೆ
Bastard Sar Saparilla	ಕನ್ಯಾಬೇರು, ಸುಗಂಧಿ ಬೇರು, ಹಾಲುಬೇರು, ನಾಮದ ಬೇರು, ನನ್ನಾರಿ ಬೇರು, ಕೆಂಪು ಗಂಧ
Bath treatment	ಜಲೋಪಚಾರ
Batton	ಹಲಗೆಯ ಚೂರು
Baulk (balk-slab)	ಚೌಕುತೊಲೆ
Beach forest	ಸಮುದ್ರ ತೀರದ ಕಾಡು
Beam	ತೊಲೆ, (12 ಅಡಿಗೂ ಉದ್ದದ, 6 ಅಡಿಗೂ ದಪ್ಪದ ತೊಲೆ)
Bearer	ಆಧಾರಕ
Bearer, seed	1. ಬೀಜಮರ, 2. ಬೀಜಾಧಾರಕ
Bearer, shade	ನೆರಳು ಸಹಿಷ್ಣು
Beat	1. ಗಸ್ತು, 2. ಅರಣ್ಯ ರಕ್ಷಕನ ಅಧೀನ ಕ್ಷೇತ್ರ
Beat up(V)	ಸಾಗಣೆತುಂಬು, ಸಸಿ ಹೋಗಿರುವ ಕಡೆ ಮರು ನೆಡುವಿಕೆ
Bed, nursery	ಸಸಿಮಡಿ, ಒಟ್ಲುಪಾತಿ
Bed, raised	ಎತ್ತರಿಸಿದ ಪಾತಿ/ಮಡಿ
Bed, seed	ಬೀಜಮಡಿ, ಬೀಜಪಾತಿ
Bed, sunken	ತಗ್ಗಿನ ಮಡಿ/ಪಾತಿ
Bed, transplant	ನಾಟಿಪಾತಿ/
Bed rock	ಆಧಾರ ಬಂಡೆ, ತಳಬಂಡೆ
Beetle	ಜೀರುಂಡೆ
Belt, fire	ಅಗ್ನಿರಕ್ಷಕ ಪಟ್ಟೆ
Belleric Myrobalan	ತಾರೆವೃಕ್ಷ, ಶಾಂತಿಮರ
Belt, hook	ಪಟ್ಟಿ ಕೊಕ್ಕೆ
Belt, protective	ರಕ್ಷಣಾ ಪಟ್ಟೆ ಸಂರಕ್ಷಕ ಪಟ್ಟೆ
Belt, safety	ಸುರಕ್ಷತಾ ಪಟ್ಟೆ
Belt, shelter	ಅಶ್ರಯ ಪಟ್ಟೆ

Belt, transition	- ಸಂಕ್ರಮಣ ಪಟ್ಟೆ
Bench terrace	ಬೆಂಚ್ ಜಗತಿ
Bending, chemical	ರಾಸಾಯನಿಕವಾಗಿ ಬಾಗಿಸುವಿಕೆ
Bending, jig	ಹಠಾತ್ತನೆ ಬಾಗಿಸುವಿಕೆ
Bending laminated	ಪದರ ಪದರವಾಗಿ ಬಾಗುವಿಕೆ
Bending, mould	ಎರಕದಂತೆ ಬಾಗಿಸುವಿಕೆ
Bending, steam	ಆವಿಯಿಂದ ಬಾಗಿಸುವಿಕೆ
Bending stress	ಬಗ್ಗಿಸುವಾಗಿನ ಒತ್ತಡ
Bent wood	ಬಾಗಿದ ದಾರು
Berm	ಕಂದಕಗಳ ನಡುವಣ ಅಡ್ಡಕಟ್ಟೆ,
Bermuda grass	ಕಾಡುಗರಿಕೆ, ಅಂಬಟೆ
Berry	ಬೆರ್ರಿ, ರಸಭರಿತ ಫಲ, ತಿರುಳುಗಾಯಿ
Bevel	ಕೋನಮಟ್ಟಿ
Beverage	ಪಾನೀಯ
B.H.(Breast height) diameter	ಅವಕ್ಷ ವ್ಯಾಸ, ಎದೆಮಟ್ಟದವ್ಯಾಸ
Bias	ಓರೆಯಾದ
Biennial	ದ್ವೈವಾರ್ಷಿಕ
Bifid	ಎರಡು ಕವಲಾದ
Bilateral symmetry	ದ್ವಿಪಾರ್ಶ್ವ ಸಮರೂಪತೆ
Bilateral access	ದ್ವಿಪಾರ್ಶ್ವಿಕ ಪ್ರವೇಶ
Bill	1. ಬೆಲೆಪಟ್ಟಿ, 2. ಹಕ್ಕಿಯ ಕೊಕ್ಕು
Billet	ಸೌದೆ ಕೊರಡು, ಸೌದೆ ತುಂಡು
Bill hook	ಕುಡುಗೋಲು
Binding	ಬಂಧನ, ಬಿಗಿಯಾಗಿ ಕೂಡಿಸುವುದು
Binomial nomenclature	ದ್ವಿನಾಮಕರಣ
Biocoenosis	ಜೀವಪರಿಸ್ಥಿತಿ ತಂತ್ರ
Biodiversity	ಜೀವಿ ವೈವಿಧ್ಯತೆ
Biogas	ಜೈವಿಕ ಅನಿಲ
Biological control	ಜೈವಿಕ ಹತೋಟಿ/ನಿಯಂತ್ರಣ
Biological spectrum	ಜೈವಿಕ ವೈವಿಧ್ಯತೆ
Biome	ಜೀವಿಸಮುದಾಯ, ಜೀವ ಸಂಘ
Bionomics	,ಜೀವಾವರಣಶಾಸ್ತ್ರ
Biosphere	ಜೀವಮಂಡಲ, ಜೈವಿಕಗೋಳ

Biota	ಜೀವರಾಶಿ
Biotic	ಜೈವಿಕ
Biotic climax	ಜೈವಿಕ ಪರಮಾವಧಿ
Biotic control	ಜೀವಿಗಳ ಜೈವಿಕ ಹತೋಟಿ
Biotic factor	ಜೈವಿಕ ಅಂಶ(ಕಾರಣ)
Biotic potential	ಜೈವಿಕ ಅಂತಸ್ಥ, ಜೈವಿಕ ಸಾಮರ್ಥ್ಯ
Biotype	ಜೈವಿಕ ಬಗೆ, ಜೈವಿಕ ರೂಪ, ಜೀವಪ್ರರೂಪ
Biped	ದ್ವಿಪಾದಿ
Bisexual flowers	ದ್ವಿಲಿಂಗ ಪುಷ್ಪಗಳು
Black Cotton soil	ಎರೆಮಣ್ಣು, ಕಪ್ಪುಮಣ್ಣು
Black Dammar	ಕರೀಧೂಪ, ಜಾಲಿ ಬಂಕೆ, ಹಾಲುಮಡ್ಡಿ, ಹರಳು ಮಡ್ಡಿ
Black Myrobalan	ಅರಳೆಕಾಯಿ, ಹರೀತಕಿ, ಅಳಲೆಕಾಯಿ
Black Stin Wood	ಎಜೋನಿ ಮರ, ಕರೀಮರ, ಭಾಲೆ ಮರ
Blank	ಸಸ್ಯಶೂನ್ಯ ಕ್ಷೇತ್ರ
Blaze	ತೊಗಟೆ ಕೆತ್ತಿದ
Bleach	ಬೆಳ್ಳಗೆ ಮಾಡು, ಬಿಳಿಚಿಸು
Blendersaumschlag, Wagner's	ವ್ಯಾಗ್ನರ್ ಪಟ್ಟೀ ಪದ್ಧತಿ
Blight	ಅಂಗಮಾರೀ ರೋಗ
Blistering Ammania	ಕಲ್ಲರಿವೆ, ಕರಿಸನ್ನಿಗಿಡ, ಅಗ್ನಿವತಿ
Block	ತಾಕು
Block regeneration	ತಾಕು ರೀತಿಯಲ್ಲಿ ಪುನರುತ್ಪತ್ತಿ
Block section	ತಾಕು ವಿಭಾಗ
Block snatch	ತಾಕು ಕುಪ್ಪ
Blooming	ಅರಳುವುದು
Board	1. ಹಲಗೆ, 2. ಮಂಡಳಿ
Board, sample	ಮಾದರಿ ಹಲಗೆ, ನಮೂನೆ ಫಲಕ
Board, foot	ಘನ ಅಂಗುಲದ ಒಂದು ಹಲಗೆ
Board of Forestry	ಅರಣ್ಯ ಮಂಡಳಿ
Board measure	ಹಲಗೆ ಅಳತೆ
Bobbin	ಉರುಳೆ ಸುತ್ತಲು ಮರದಗಾಲಿ
Boiling under vacuum	ನಿರ್ವಾತ ಕುದಿ
Boiling without vacuum	ಅನಿರ್ವಾತ ಕುದಿ
Bole	ಕಾಂಡ

Bole, clean	ನೇರವಾದ, ಕವಲೊಡೆಯದ ಕಾಂಡ
Bole, clear	ರೆಂಬೆರಹಿತ ಕಾಂಡ
Bole, commercial	ವಾಣಿಜ್ಯಯೋಗ್ಯ ಕಾಂಡ
Bole, standard timber	ಮಾನಕ ದಿಮ್ಮಿಕಾಂಡ, ವಿವಿಧ ಗಾತ್ರದ ಕಾಂಡ
Bolt	ಅಗುಳಿ, 8 ಅಡಿ ಉದ್ದಕ್ಕಿಂತ ಕಡಿಮೆ ಇರುವ ಮರದ ತುಂಡು
Bolt hole treater	ಅಗುಳಿರಂಧ್ರ ಉಪಚಾರಕ
Bonduenut (Fevernut)	ಕಿರಿಗಜ್ಜುಗ, ಸಣ್ಣಗೆಜ್ಜುಗ, ಗೆಜ್ಜೆಗೆಕಾಯಿ,
Bone, dry	ಒಣ ಮೂಳೆ
Boom	ದಿಡೀರ್ ವಾಣಿಜ್ಯ ಚಟುವಟಿಕೆ, ತೇಲುದಿಮ್ಮಿ ತಡೆಗಟ್ಟು, ವನ್ಯಪ್ರಾಣಿಗಳ ಕೂಗು
Border	ಗಡಿ, ಸರಹದ್ದು
Bore hole	ತೋಡುರಂಧ್ರ
Borer, collar	ಬುಡಕೊರೆಯುವ ಹುಳು
Borer, marine	ಸಮುದ್ರದ ಮರ ಕೊರೆಯುವ ಹುಳು
Borer, Pressler's	ಪ್ರಸ್ಲರನ ಮರ ಕೊರೆಯುವ ಉಪಕರಣ
Borer, shoot	ಕಾಂಡ ಕೊರೆಯುವ ಹುಳು, ಪ್ರಕಾಂಡ ಕೊರಕ
Borer, soil	ಮಣ್ಣು ಕೊರಕ, ಮಣ್ಣು ಬೈರಿಗೆ
Borer, systemic	ಅಂತರ್ ಕಾಂಡ ಕೊರೆಯುವ ಹುಳು
Borer, twig	ರೆಂಬೆ ಕೊರಕ, ರೆಂಬೆ ಕೊರೆಯುವ ಹುಳು
Boring rod	ಕೊರಕದಂಡ
Botany Branch	ಸಸ್ಯಶಾಸ್ತ್ರ ಶಾಖೆ
Boucherie process	ಬೌಚರಿ ಪ್ರಕ್ರಿಯೆ
Boulton process	ಬೋಲ್ಟನ್ ಪ್ರಕ್ರಿಯೆ
Bow (length wise)	ಉದ್ದಕ್ಕೂ ಬಾಗಿದ ಬಿಲ್ಲು, ಇಂದ್ರಚಾಪ
Bow, saw	ಬಾಗಿದ ಗರಗಸ, ಬಿಲ್ಲು ಗರಗಸ
Bract	ಪುಷ್ಪಪತ್ರಕ
Branch, epicormic	ಕಾಂಡೋದ್ಭವ ರೆಂಬೆಗಳು
Branch, wood	ಕವಲುದಾರು, ಕವಲುಗಟ್ಟಿಗೆ, ಕೊಂಬೆ ಮರ
Bread fruit	ಸೀಮೆಹಲಸು, ಗುಜ್ಜ ಹಲಸು, ರೊಟ್ಟಿ ಹಲಸು
Breaking strength	ಮುರಿಯುವ ಬಲ, ಒಡೆಯುವ ಬಲ
Breaking strength, nominal	ಸಾಂಕೇತಿಕ ವಿಭಜನ/ಮುರಿಯುವ ಸಾಮರ್ಥ್ಯ

Breed	1. ತಳಿ, 2. ಮರಿ ಮಾಡುವಿಕೆ
Breeder	ತಳಿಸಂವರ್ಧಕ, ತಳಿಶಾಸ್ತ್ರಜ್ಞ
Breeding	ಪ್ರಜನನ, ತಳಿಸಂವರ್ಧನೆ, ತಳಿಅಭಿವೃದ್ಧಿ
Breeding farm	ತಳಿಸಂವರ್ಧನ ಕ್ಷೇತ್ರ, ತಳಿಅಭಿವೃದ್ಧಿ ಕೇಂದ್ರ
Breeding season	ಈಯುವ ಕಾಲ ಮರಿಮಾಡುವ ಕಾಲ
Bridle Path	ಕಣಿವೆದಾರಿ, ಕುದುರೆ ಮಾರ್ಗ/ಜಾಡು
Bright rope	ಹೊಳಪಿನ ಹಗ್ಗ/ಉರುಲು
Broadcasting, sowing	ಎರಚು ಬಿತ್ತನೆ
Broadleaved tree	ಅಗಲ ಎಲೆಗಳ ಮರ
Brood	ಗೂಡು ಮರಿ
Brood lac	ಬೀಜದ ಅರಗು
Broom, witches	ಕುಂಚ ಪೊರಕೆ
Brown earth (brown forest soil)	ಕಂದು ಕಾಡು ಮಣ್ಣು
Browsing	ಚಿಗುರು ಮೇಯುವುದು
Brush matting	ಕುರುಚಲು ಆವರಣ
Brush treatment	1. ಕುರುಚಲು ಉಪಚಾರ, 2. ಬ್ರಷ್ ಉಪಚಾರ
Brush wood	ಕುರುಚಲು ಗಿಡಗಳ ಕಟ್ಟಿಗೆ
Buch wheat	ಕಾಡುಗೋಡಿ
Bucking (logging)	ದಿಮ್ಮಿ ಕತ್ತರಿಸುವಿಕೆ
Bucking, under	ದಿಮ್ಮಿಯ ಕೆಳಕತ್ತರಿಸುವಿಕೆ, ದಿಮ್ಮಿಯ ಕೆಳಭಾಗದಲ್ಲಿ ಕತ್ತರಿಸುವಿಕೆ
Bud, dormant	ಸುಪ್ತಾವಸ್ಥೆಯ ಮೊಗ್ಗು
Bud, latent	ಗುಪ್ತಮೊಗ್ಗು
Budding	ಕಣ್ಣುಹಾಕುವಿಕೆ, ಮೊಗ್ಗುಮಾಡುವಿಕೆ
Buffalow Thorn	ಗಬ್ಬು ಜಾಲಿ, ಮುಳ್ಳಿನ ಜಾಲಿ
Buffalow Grass	ಕಾಡುರಾಗಿ ಹುಲ್ಲು, ಕೋಣನ ತಲೆ ಹುಲ್ಲು
Buffer action	1. ಕಾಪುತಡೆಕ್ರಿಯ, 2. ಉಭಯ ಪ್ರತಿರೋಧಕ್ರಿಯೆ
Buffer stripping	ಕಾಪುತಡೆ ಪಟ್ಟಿಹಾಕುವಿಕೆ, ಉಭಯ ಪ್ರತಿರೋಧಪಟ್ಟಿ
Bug	ತಗಣೆ
Bulbil	ಕಂದಿಕೆ, ಮರಿಕಂದು
Bulk density of soil	ಮಣ್ಣಿನ ಬೃಹತ್ ಗಾತ್ರದ ಸಾಂದ್ರತೆ/
Bulldozer	ಬುಲ್ ಡೋಜರ್, ಮಾರೀ ಹಲುಬೆ
Bunch	ಗುಚ್ಛ, ಪುಂಜ, ಗೊಂಚಲು

Bunching	ಗೊಂಚಲು ಮಾಡುವಿಕೆ
Bund	ಒಡ್ಡು
Burried soil	ಹೂತ ಮಣ್ಣು
Burl	ಅಂಟುಪುರುಳೆ
Burning, controlled	ನಿಯಂತ್ರಿತ ಸುಡುವಿಕೆ
Burning, debris	ಮುರುಕಲುಗುಪ್ಪೆ ಸುಡುವಿಕೆ
Burning, early	ಮುಂಗಡ ಸುಡುವಿಕೆ
Burning, late	ನಿಧಾನವಾಗಿ/ತಡವಾಗಿ ಸುಡುವಿಕೆ
Burning, patch	ತೇಪೆ ಸುಡುವಿಕೆ
Burning, strip	ಪಟ್ಟೆ ಸುಡುವಿಕೆ
Burr	ಬರ್, ಸುತ್ತ ಮೊಗ್ಗೆಗಳಿಂದಾದ ಕಾಂಡದ ಉಬ್ಬು ಗಂಟು
Burweed	ಮರಳುಮತ್ತಿ
Bush	ಪೊದೆ
Butt	ಮರದ ಬುಡಿಕೆ
Butt log	ಬುಡದ ದಿಮ್ಮಿ
Butt treatment	ಮರದ ಬುಡಿಕೆ ಉಪಚಾರ
Butteress	ಬುಡದ ಆನಿಕೆ, ಆಧಾರ, ಊರೆ ಬೇರು

C

Cable	ಹಗ್ಗ, ತಂತಿ
Cable, anchorage	ಲಂಗರು ಹಗ್ಗ, ಲಂಗರು ತಂತಿ
Cable clamp	ತಂತಿ ಹಿಡಿಕೆ, ಹಗ್ಗದ ಹಿಡಿಕೆ
Cable hauling	ಹಗ್ಗ ಎಳೆಯುವುದು
Cable puller	ತಂತಿ ಎಳೆಯುವ ಕರ್ಷಕ/ಸಾಧನ
Cable way	ತಂತೀಮಾರ್ಗ, ತಂತೀಪಥ
Cadamba tree	ಅರಿಸಿನ ತೇಗ, ಕಡವಾಳ, ಕಡಹದಮರ, ಕಡವ
Caducous	ಉದುರಿಹೋಗುವಿಕೆ (ಸಸ್ಯಭಾಗಗಳು)
Caesalpiniaceae	ಅಶೋಕವೃಕ್ಷ, ಗಂಧಪುಷ್ಪ, ಅಚೆಂಗೆ
Cake, oil	ಎಣ್ಣೆ ಹಿಂಡಿ
Calabash tree	ಸೋರೆ ಬುರುಡೆ
Calcarious soil	ಸುಣ್ಣಮಿಶ್ರಿತ/ಸುಣ್ಣಯುಕ್ತ ಮಣ್ಣು
Calcification	ಸುಣ್ಣಸಂಗ್ರಹವಾಗುವಿಕೆ, ಸುಣ್ಣೀಕರಣ
Calcifuge	ಸುಣ್ಣ ಅಪೇಕ್ಷಿಸದ ಸಸ್ಯ

Calciphile	ಸುಣ್ಣಾಪೇಕ್ಷಿ ಸಸ್ಯ
Callipers, girth	ಸುತ್ತಳತೆ ಮಾಪಕ
Callipers, tree	ವೃಕ್ಷಸುತ್ತಳತೆ ಮಾಪಕ
Callus	ಗಾಯದ ಮೇಲೆ ಬೆಳೆಯುವಜಡ್ಡು, ಗಾಯವಾದ ಮೇಲೆ ಮರಗಟ್ಟಿದ ಜಡ್ಡು
Cambium	ವರ್ಧನಸ್ತರ
Camphor scented basil	ಕರ್ಪೂರತುಳಸಿ
Cane	ಬೆತ್ತ
Canine tooth	ಕೋರೆಹಲ್ಲು
Canker	ಹುಣ್ಣು, ಗಿಣ್ಣುರೋಗ
Cannon Ball Tree	ನಾಗಲಿಂಗ, ಲಿಂಗದಹೂವಿನಮರ
Cant hook	ಓರೆ ಕೊಕ್ಕೆ
Canopy	ವೃಕ್ಷ ಶಿಖರ, ಮೇಲ್ಚಪ್ಪರ, ಚಪ್ಪರ
Canopy class	ಶಿಖರ ವರ್ಗ, ಚಪ್ಪರ ವರ್ಗ
Canopy density	ವೃಕ್ಷಶಿಖರ ಸಾಂದ್ರತೆ, ಚಪ್ಪರ ಸಾಂದ್ರತೆ
Capacity, field moisture	ಕ್ಷೇತ್ರ ತೇವಾಂಶ ಸಾಮರ್ಥ್ಯ
Capacity, germination	ಮೊಳಕೆ/ಅಂಕುರ ಸಾಮರ್ಥ್ಯ
Capacity, grazing	ಮೇಯುವ ಸಾಮರ್ಥ್ಯ
Capacity, infiltration	ಒಳಸೋಸಿಕೆ ಸಾಮರ್ಥ್ಯ
Capacity, yield	ಇಳುವರಿ ಸಾಮರ್ಥ್ಯ
Cape Gooseberry	ಬುಡ್ಡೆಹಣ್ಣು, ದೊಡ್ಡಬುಡ್ಡೆ ಗಿಡ
Capillary porosity	ಲೋಮನಾಳ ಸಚ್ಛಿದ್ರತೆ/ರಂಧ್ರತೆ
Capillary tube	ಲೋಮನಾಳ/ಕೇಶಾಕರ್ಷಕ ನಳಿಕೆ
Capillary water	ಲೋಮನಾಳದ ನೀರು
Capital, forest	ಅರಣ್ಯ ಬಂಡವಾಳ, ವನ್ಯಬಂಡವಾಳ
Capital value	ಬಂಡವಾಳ ಮೌಲ್ಯ
Capitulum	ಪುಷ್ಪಮಂಜರಿ ಅಕ್ಷ ಶೃಂಗ
Capsular fruit	ಕೋಶಫಲ, ಸಿಡಿಯುವ ಫಲ
Carapace	ಮೇಲ್ಚಿಪ್ಪು
Caraway seed (Ajwan seed)	ಶಹಾಜೀರಿಗೆ, ಸೀಮೆ ಸೋಂಪು
Carbonization	ಇಂಗಾಲೀಕರಣ
Carbonic acid	ಇಂಗಾಲಾಮ್ಲ
Carbon nitrogen ratio	ಇಂಗಾಲ ಸಾರಜನಕ ಪ್ರಮಾಣ

Card process	ಕಾರ್ಡ್‌ಪ್ರಕ್ರಿಯೆ
Carnivorous	ಮಾಂಸಾಹಾರಿ
Carpel	ಅಂಡಕೋಶ
Carrier	ವಾಹಕ
Carrying capacity	ತಡೆದುಕೊಳ್ಳುವ ಸಾಮರ್ಥ್ಯ
Cartilage	ಮೃದ್ವಸ್ಥಿ
Catch crop	ತಾತ್ಪೂರ್ತಿಕ/ತಾತ್ಕಾಲಿಕ ಬೆಳೆ
Catchment area	ಇಳಿಮೇಡು, ಜಲಾನಯನ ಪ್ರದೇಶ
Catena	ಮಣ್ಣಿನ ಶ್ರೇಣಿ
Cat ion exchange	ಧನ ವಿದ್ಯುದ್ವಾಹೀಕಣ/ಅಯಾನು ವಿನಿಮಯ
Cation exchange capacity	ಧನ ವಿದ್ಯುದ್ವಾಹೀಕಣ/ಅಯಾನು ವಿನಿಮಯ ಸಾಮರ್ಥ್ಯ
Caterpillar	ಕಂಬಳಿ ಹುಳು
Cattarhine monkeys	ಅಧೋಮುಖಿ ಮಂಗಗಳು
Cattle	ದನ
Caudal fin	ಮೀನಿನ ಬಾಲದ ಈಜುರೆಕ್ಕೆ
Caudate	ಬಾಲವಿರುವ
Cauline	ಕಾಂಡದ ಮೇಲೆ ಬೆಳೆಯುವ
Cayenne pepper (goat pepper)	ಮೆಣಸಿನಕಾಯಿ, ಕಾರದಮೆಣಸಿನ ಕಾಯಿ
Cellulose	ಸೆಲ್ಯೂಲೋಸ್, ಸಸ್ಯತಂತು
Cenozoic era	ಆಧುನಿಕ ಜೀವಕಲ್ಪ
Census	ಗಣತಿ
Census, strip	ಪಟ್ಟಿಗಣತಿ
Central American Rubber Tree	ಸೀಮೆ ರಬ್ಬರ್ ಗಿಡ
Central Research Co-ordination Section	ಕೇಂದ್ರಿಯ ಸಂಶೋಧನ ಸಂಘಟನ ವಿಭಾಗ
Century Plant (Railway aloe)	ಆನೆಕತ್ತಾಳೆ, ಭೂತಾಳೆ, ರಾಕ್ಷಸತಾಳೆ, ಆನೆಮಂಡಿ,
Centripetal	ಕೇಂದ್ರಾಭಿಗಾಮಿ
Ceylon Oak	ಗುಡ್ಡದ ಇಪ್ಪೆ, ದೊಡ್ಡಾಲೆ, ಹೆಣ್ಣು ಮತ್ತಿ, ಕವಲುಮರ
Chaff	ಸಿಪ್ಪೆ, ಪೊರೆ
Chaff flower	ಉತ್ತರಾಣೆ, ಮಯೂರಕ, ಕೆಂಪು ಉತ್ತರಾಣೆ

Chalaza	ಬೀಜಾಂಡಕೋಶ ಭಾಗ
Chain saw	ಸರಪಳಿ ಗರಗಸ
Chaining	ಸರಪಳಿ ಹಾಕುವಿಕೆ
Chalk, solon	ಸೋಲನ್, ಸೀಮೆಸುಣ್ಣ(ಚಾಕ್)
Channel, resin character	ರಾಳ ಸ್ವಭಾವದ ನಾಲೆ
Character	ಗುಣಲಕ್ಷಣ
Character, dominant	ಪ್ರಭಾವೀ ಲಕ್ಷಣ
Character recessive	ಅಪ್ರಭಾವೀ ಲಕ್ಷಣ
Charcoal tree	ಕರುಹಾಲೆ, ಹೋಮೆ
Charge	1. ಖರ್ಚು, 2. ಹೊರೆ
Charge, annual	ವಾರ್ಷಿಕ ವೆಚ್ಚ
Charging tank	ನೀರಿಳಿಸುವ ಹಳ್ಳಕೊಳ್ಳ, ನಿರ್ಣಾಯಕ ತೊಟ್ಟಿ,
Check dam	ತಡೆಗಟ್ಟೆ
Check enumeration	ತಾಳೆ ಎಣಿಕೆ
Checkpost	ತಪಾಸಣೆ ಠಾಣೆ/ಕೇಂದ್ರ
Chemical bending	ರಾಸಾಯನಿಕ ಬಾಗುವಿಕೆ
Chemistry of Forest Products Branch	ವನೋತ್ಪನ್ನ ರಾಸಾಯನ ಶಾಖೆ, ಅರಣ್ಯೋತ್ಪನ್ನಗಳ ರಸಾಯನ ಶಾಸ್ತ್ರ ಶಾಖೆ
Chernozem	ಚೆರ್ನೋಜೆಮ್ (ಮಣ್ಣು)
Chestnut soil	ಚೆಸ್ಟನಟ್ ಮಣ್ಣು
Chickling Vetch	ಚನ್ನಂಗಿ ಬೇಳೆ, ಕೇಸರಿ ತೊಗರಿ, ವಿಷ ತೊಗರಿ
Chinese Rose	ಕೆಂಪು ಸೂರ್ಯಕಾಂತಿ, ನೆಲದಾವರೆ, ಬೆಟ್ಟ ತಾವರೆ
Chinese Tallow Tree	ಮೇಣದ ಮರ
Chlorophyll	ಪತ್ರ ಹರಿತ್ತು
Chloroplast	ಹರಿದ್ರೇಣು, ಹರಿತ್ ಲವಕ
Chlorosis	ಹರಿದ್ವಿಹೀನತೆ, ಹರಿತ್‌ರಾಹಿತ್ಯತೆ
Chondrichthyes	ಮೃದ್ವಸ್ಥಿಮೀನು
Chordate	ಬೆನ್ನೆಲುಬಿನ ಪ್ರಾಣಿ
Chresard	ಲಭ್ಯ ಮಣ್ಣುನೀರು
Chromosome	ವರ್ಣತಂತು
Chute	ಇಳಿಹೊನಲು, ಜಾರುಮಾರ್ಗ
Cilia	ಸ್ಪಂದನ ರೋಮ
Cinchonabark	ಕ್ಷಯನಾಮರ, ಜ್ವರಹರಿ, ಸಿಂಕೋನ

Circle	ವೃತ್ತ
Circle, forest	ಅರಣ್ಯ ವೃತ್ತ
Circle, working	ಕಾರ್ಯಕಾರೀ ವೃತ್ತ
Circumference (of wire rope)	ತಂತಿ ಹಗ್ಗದ ಪರಿಧಿ
Citron	ದೇವಮಾದಳ, ಬೀಜಪೂರ, ಮಾದಳ, ರುಚಿಕತ್ರಿ
Citronella Grass	ಕಾಮಾಕ್ಷಿ ಹುಲ್ಲು, ಗಂಧಹಂಚಿ, ಸಿಟ್ರೊನೆಲ್ಲಾ ಎಣ್ಣೆ ಹುಲ್ಲು
Cladode (phyllocladode)	ಪತ್ರ ಕಾಂಡ
Clam	ಚಿಪ್ಪು ಮೀನು
Clamp, cable	ತಂತಿ ಹಗ್ಗದ ಹಿಡಿಕೆ
Clan	ಕುಲ, ಗೋತ್ರ
Class, age	ಆಯು ವರ್ಗ
Class frequency	ವರ್ಗ ಆವರ್ತನ
Class, locality	ಸ್ಥಳ ವರ್ಗ
Class, site	ಸ್ಥಾನ ವರ್ಗ
Class, size	ಗಾತ್ರ ವರ್ಗ
Class, soil	ಮಣ್ಣು ವರ್ಗ
Classification, soil	ಮಣ್ಣು ವರ್ಗೀಕರಣ
Claw	ಪಂಜ, ಮೊನೆಯುಗುರು
Clay	ಜೇಡಿ
Clayey	ಜೇಡಿಯುತ
Clay loam (clayey loam)	ಜೇಡಿಗೋಡು
Clay pan	ಜೇಡಿ ಪದರ
Clean bole	ರೆಂಬೆಯಿಲ್ಲದ ಕಾಂಡ
Clean cutting	ಚೊಕ್ಕಟಕತ್ತರಿಕೆ
Clean felling system	ಪೂರ್ತಿಕಡಿಯುವ ವ್ಯವಸ್ಥೆ
Cleaning, steam	ಆವಿ ಸ್ವಚ್ಛಗೊಳಿಸುವಿಕೆ
Clear felling system	ಪೂರ್ಣಕಡಿತದ ಪದ್ಧತಿ
Clearing	ಕಾಡು ಸಮರುವಿಕೆ
Clearer	ಕಡಿಗತ್ತಿ
Clear strip system	ಪೂರ್ಣಪಟ್ಟೆಪದ್ಧತಿ
Cleft	ಸೀಳು
Climate, micro	ಸೂಕ್ಷ್ಮವಾಯುಗುಣ

Climate, subtropical	ಉಷ್ಣವಲಯ ವಾಯುಗುಣ
Climate, temperate	ಸಮಶೀತೋಷ್ಣ (ಶೀತ) ವಾಯುಗುಣ
Climate, tropical	ಉಷ್ಣವಲಯ ವಾಯುಗುಣ
Climatic climax	ವಾಯುಗುಣ ಪರಾಕಾಷ್ಠೆ
Climatic factor	ವಾಯುಗುಣ ಅಂಶ
Climatic index	ವಾಯುಗುಣ ಸೂಚಿ
Climax	ಪರಾಕಾಷ್ಠೆ
Climax, biotic	ಜೈವಿಕ ಪರಾಕಾಷ್ಠೆ
Climax, climate	ವಾಯುಗುಣ ಪರಾಕಾಷ್ಠೆ
Climax, community	ಸಮುದಾಯ ಪರಾಕಾಷ್ಠೆ
Climax, disturbance	ಪ್ರಕ್ಷೋಭನ ಪರಾಕಾಷ್ಠೆ
Climax, forest	ಅರಣ್ಯ ಪರಾಕಾಷ್ಠತೆ
Climax unit	ಪರಾಕಾಷ್ಠತೆ ಘಟಕ
Climber	ಹಬ್ಬು ಬಳ್ಳಿ, ಏರುಬಳ್ಳಿ
Climber cutting	ಹಬ್ಬುಬಳ್ಳಿ ಕತ್ತರಿಕೆ
Climbing iron	ಆರೋಹಣ ಕೀಲು
Cline	ಪ್ರವಣತೆ
Clone	ನಿರ್ಲಿಂಗ ರೀತಿಯಲ್ಲಿ ಅಭಿವೃದ್ಧಿಪಡಿಸಿದ ಸಸ್ಯಾಂಗತಳಿ, ಒಂದೇತಾಯಿಮರದ ಸಸ್ಯಾಂಗವಂಶ ವೃದ್ಧಿಯಿಂದಾದತಳಿ
Close, to	ವರ್ಜಿಸುವಿಕೆ
Closed canopy	ಆವೃತ ಮೇಲ್ಛಪ್ಪರ
Closed forest	1. ಸಂವೃತ ವನ, 2. ಮುಚ್ಚಿದ ಅರಣ್ಯ
Closed formation	ಆವೃತ ರಚನೆ
Close season	ವರ್ಜಿತ ಕಾಲ
Closure	1. ವರ್ಜನ, 2. ಮುಚ್ಚಿಕೊಳ್ಳುವಿಕೆ
Closure, crown	ಮುಕುಟ ಮುಚ್ಚಿಕೊಳ್ಳುವಿಕೆ
Clump	ಮೆಳೆ, ಗುಂಪು
Coalgas tar	ಕಲ್ಲಿದ್ದಲು ಅನಿಲ ಟಾರು
Coaltar	ಕಲ್ಲಿದ್ದಲು ಟಾರು
Coaltar creosote	ಕಲ್ಲಿದ್ದಲು ಟಾರು ಕ್ರಿಯೋಸೋಟ್
Cobra process	ಅಂತಃಕ್ಷೇಪಣ ಪ್ರಕ್ರಿಯೆ
Cockspur grass	ಕೋಳಿಕಾಲುಹುಲ್ಲು
Cocoon	ಕೀಟಕೋಶ, ಗೂಡು

Co dominant	ಸಹಪ್ರಭಾವಿತ
Co-efficient, correlation	ಸಹಸಂಬಂಧ ಗುಣಾಂಕ
Co-efficient, wilting	ಕಮರು/ಬಾಡುವಿಕೆ ಗುಣಾಂಕ
Co-efficient of variation	ವ್ಯತ್ಯಸ್ಥ ಗುಣಾಂಕ
Coelenterate	ಕುಟುಕು ಕಣವಂತಗಳು
Coil	ಸುರುಳಿ
Cokeoven tar	ಕಲ್ಲಿದ್ದಲು ಕಿಟ್ಟ ಬಟ್ಟೀಟಾರ್
Coke test	ಕಲ್ಲಿದ್ದಲು ಕಿಟ್ಟ ಪರೀಕ್ಷಣೆ
Cold blood	ಶೀತರಕ್ತ
Colerhiza	ಮೂಲಾಂಕುರ ಕವಚ
Collar borer	ಕಾಲರ್(ಭೇದಕ) ಕೊರೆಯುವ ಸಾಧನ
Collar root	ಕಾಲರ್ ಬೇರು
Collenchyma	ಸ್ಥೂಲಕೋಣೋತಕ
Colluvial soil	ಕೊಲ್ಲೂವಿಯಲ್ ಮಣ್ಣು, ಬೆಟ್ಟದ ತಪ್ಪಲಲ್ಲಿ ಸಂಗ್ರಹಣೆಯಾದ ಕಲ್ಲುಮಣ್ಣು
Colonist	ನೆಲಸುನಾಡಿಗ
Colonization	ವಸಾಹತುಗೊಳ್ಳುವಿಕೆ
Comb	ಜೇನುಹುಟ್ಟು
Command area	ಅಚ್ಚುಕಟ್ಟು ಪ್ರದೇಶ, ಜಲಾನಯನ ಪ್ರದೇಶ
Commensal	ಆಶ್ರಯ ಜೀವಿ
Commercial bole	ವಾಣಿಜ್ಯ ಶ್ರೇಷ್ಠ ಕಾಂಡ
Commercial forestry	ವಾಣಿಜ್ಯ ಅರಣ್ಯಶಾಸ್ತ್ರ
Commercial timber	ವಾಣಿಜ್ಯ ಮರಮುಟ್ಟು
Commercial volume table	ವಾಣಿಜ್ಯ ಗಾತ್ರ ಪಟ್ಟಿ
Common millet	ಕರೀಬರಗು, ಬರಗು, ಬಿಳೀಬರಗು
Common sage	ಸಣ್ಣ ಕರ್ಪೂರದ ಗಿಡ
Community	ಸಮುದಾಯ
Community forest	ಸಮುದಾಯ ವನ
Companion cell	ಸಹಕೋಶಿಕೆ
Compartment	ಅಂಕಣ
Compartment, history	ಅಂಕಣ ವೃತ್ತ/ಚರಿತ್ರೆ
Compartment line	ಅಂಕಣ ರೇಖೆ
Campass, tree	ವೃಕ್ಷ ವ್ಯಾಸಮಾಪೀ

Compatibility	ಸಹಯೋಗ, ಅನುರೂಪತೆ
Complex, soil	ಮಣ್ಣು ಸಂಕೀರ್ಣ
Composite Wood Branch	ಸಮ್ಮಿಶ್ರದಾರು ಶಾಖೆ
Composition	ರಚನೆ
Composition, antisplitting	ವಿಘಟನ ವಿರೋಧೀ ರಚನೆ
Compounding (of offence)	ಪ್ರಶಮನ (ಅಪರಾಧದ)
Concentrated regeneration	ಕೇಂದ್ರೀಕೃತ ಪುನರುತ್ಪತ್ತಿ
Concentrated regeneration, system of	ಕೇಂದ್ರೀಕೃತ ಪುನರುತ್ಪತ್ತಿ ಪದ್ಧತಿ
Concession	ರಿಯಾಯಿತಿ, ಸೋಡಿ
Concession, forest	ಅರಣ್ಯ ರಿಯಾಯಿತಿ
Concretion	ಒಟ್ಟುಗೂಡಿಕೆ
Concretion, lime	ಸುಣ್ಣಒಟ್ಟುಗೂಡಿಕೆ
Conditioning	ಅನುಕೂಲನ
Conducting cell	ವಾಹಕಕೋಶ
Confidential Assistant	ಗುಪ್ತಸಹಾಯಕ
Conflagration	ದಳ್ಳುರಿ, ಕಾಡ್ಗಿಚ್ಚು
Conifer	ಶಂಕು ವೃಕ್ಷ
Conjugation	ಸಮಸಂಯೋಗ, ಅನುಬದ್ಧತೆ
Conservarion, soil	ಮಣ್ಣು ಸಂರಕ್ಷಣೆ
Conservation, wild life	ವನ್ಯಜೀವಿ ಸಂರಕ್ಷಣೆ
Conservative grazing	ಸಂರಕ್ಷಿತ ಮೇಯಿಸುವಿಕೆ
Consistence	ಸಾಂಗತ್ಯ, ಹೊಂದಿಕೆ
Consociation	ಸಹಭಾಗಿ
Consocies	ಸಂಸಂಘಕ
Constancy	ಸ್ಥಿರತೆ
Constitution	1. ರಚನೆ, 2. ಸಂವಿಧಾನ
Construction (of wire rope)	ತಂತೀ ಹಗ್ಗ ರಚನೆ
Construction, all veneer	ಸ್ತರಣ-ಮಾತ್ರ ರಚನೆ
Construction, warrington	ವಾರಿಂಗ್ಟನ್ ರಚನೆ
Container, plant	ಸಸಿಪಾತ್ರೆ, ಸಸಿ ಧಾರಕ
Content, moisture	ತೇವಾಂಶ
Contour cropping	ಸಮಪಾತಳಿ ಬೆಳೆ ಬೆಳೆಯುವಿಕೆ

Contour furrow	ಸಮಪಾತಳಿ ದೋಣಿ, ಕಾಲುವೆ ಮುಖ್ಯಸಾಲು
Contour trench	ಸಮಪಾತಳೀ ಕಂದಕ/ತೋಡು
Control	ನಿಯಂತ್ರಣ, ಹತೋಟಿ
Control, area	ಕ್ಷೇತ್ರ ನಿಯಂತ್ರಣ, ನಿಯಂತ್ರಣ ಕ್ಷೇತ್ರ
Control, basal area	ಆವಕ್ಷ ಕ್ಷೇತ್ರ ನಿಯಂತ್ರಣ, ತಳವಿಸ್ತೀರ್ಣ ಹತೋಟಿ
Control, biological	ಜೈವಿಕ ಹತೋಟಿ/ನಿಯಂತ್ರಣ
Control, biotic	ಜೀವೀಯ ನಿಯಂತ್ರಣ
Control, natural	ಪ್ರಾಕೃತಿಕ/ನೈಸರ್ಗಿಕ ನಿಯಂತ್ರಣ
Control, volume	ಗಾತ್ರನಿಯಂತ್ರಣ
Control, yield	ಇಳುವರಿ ನಿಯಂತ್ರಣ
Control, form	ಆಕಾರ ನಿಯಂತ್ರಣ
Control line	ನಿಯಂತ್ರಣ ರೇಖೆ
Controlled burning	ನಿಯಂತ್ರಿತ ದಹನ
Controlled grazing	ನಿಯಂತ್ರಿತ ಮೇಯಿಸುವಿಕೆ
Control map	ನಿಯಂತ್ರಣ ನಕ್ಷೆ
Control plot	ನಿಯಂತ್ರಣ ತಾಕು
Convection frost	ಸಂವಹನ ತುಷಾರ/ಮಂಜು
Conventional energy	ಸಾಮಾನ್ಯ ಬಳಕೆಯ ಇಂಧನ
Conversion	ಪರಿವರ್ತನೆ
Conversion, timber	ಚೌಬೀನೆ ರೂಪಾಂತರ
Conversion period	ರೂಪಾಂತರ ಅವಧಿ
Conversion system	ರೂಪಾಂತರಣ/ಪರಿವರ್ತನ ಪದ್ಧತಿ
Conveyor rope	ವಾಹನ ಹಗ್ಗ
Coppice	ಕಚ್ಚಿಗುರು, ಕೂಳೆ ಬೆಳೆ, ಕೂಳೆ ಚಿಗುರು
Coppice, shoot	ಚಿಗುರು ಪ್ರಕಾಂಡ, ಕೂಳೆಮರ
Coppice forest	ಚಿಗುರು ಕಾಡು, ಕೂಳೆ ಕಾಡು
Coppice seedling	ಕುರುಚಲು ಸಸಿ, ಚಿಗುರು/ಕೂಳೆ ಸಸಿ
Coppice with reserves system	ಮೀಸಲು ಸಹಿತ ಕೂಳೆ ಕುರುಚಲು ಪದ್ಧತಿ
Coppice with standards system	ಕೂಳೆಸಹಿತ ಮೂಲ ಬೆಳೆಪದ್ಧತಿ
Coral plant	ಹವಳದ ಸಸ್ಯ
Coral wood	ಆನೆಗುಲಗಂಜಿ, ದೊಡ್ಡಗುಲಗಂಜಿ
Cord	ನಿಗದಿತ ಗಾತ್ರದ ಕಟ್ಟಿಗೆಯ ಕಟ್ಟೆ

Cord wood	ಚಿಕ್ಕದಾಗಿ ಕತ್ತರಿಸಿದ ಕಟ್ಟಿಗೆ
Core	ತಿರುಳು, ಗರ್ಭ
Cork	ಬಿರಡೆ, ಕಾರ್ಕ್
Corm	ಕಂದ
Cornel Wood (Blood twig, Dog wood)	ಕೆಂಪುಕಡ್ಡಿ, ನಾಯಿ ಕಡ್ಡಿ, ರಕ್ತಮರ
Corolla	ದಳವಲಯ
Cortex	ತೊಗಟೆ, ಹೊರಮ್ಮೈ
Correlation	ಸಹಸಂಬಂಧ
Correlation analysis	ಸಹಸಂಬಂಧ ವಿಶ್ಲೇಷಣೆ
Correlation co-efficient	ಸಹಸಂಬಂಧ ಗುಣಾಂಕ
Corrosion	ಸವೆತ
Corymb	ನೀಳಛತ್ರ
Cosmic ray	ವಿಶ್ವಕಿರಣ
Costur,	ಕೋಷ್ಠ, ಕೋಸ್ಟ
Cost value	ಅಸಲು ಮೌಲ್ಯ
Couch grass (Creeping grass)	ಗರಿಕೆ ಹುಲ್ಲು
Counter fire	ಪ್ರತ್ಯಗ್ನಿ, ಪ್ರತಿಬೆಂಕಿ, ವಿರುದ್ಧ ಬೆಂಕಿ
Country Mallow	ತುರಬೀಗಿಡ, ಶ್ರೀಮುದ್ರೆಗಿಡ
Coupe	ವಾರ್ಷಿಕ ಕಡಿಯುವ ಅರಣ್ಯ ಕ್ಷೇತ್ರ
Coupling	ಜೋಡಿ
Course, ant proof	ಇರುವೆರೋಧಕ ಲೇಪ
Covarience	ಸಹಪ್ರಸರಣ
Cover crop	ಹೊದಿಕೆ ಬೆಳೆ
Cover, crown	ಛತ್ರ ಆವರಣ, ಮುಕುಟ ಹೊದಿಕೆ
Cover, forest	ಕಾಡು ಹೊದಿಕೆ
Cover, low (undergrowth)	ಸರಿಯಾಗಿ ಬೆಳೆಯದಿರುವಿಕೆ
Cover, ground	ಭೂ ಹೊದಿಕೆ
Cover, plant	ಭೂಸಂರಕ್ಷಣಾ ಸಸ್ಯ
Crab	ಏಡಿ, ನಳ್ಳಿ
Crabs Eye	ಗುಲಗಂಜಿ, ಮಧುಕವಲ್ಲಿ
Craiabes thinning	ಕ್ರೇಬ್ ತೆಳುವುಮಾಡುವಿಕೆ
Cray fish	ಬೆಣಸ

Creat	ಗೆ ನೆಲಬೇವು, ಕಾಲಮೇಘ
Creeper	ತೆವಳು ಬಳ್ಳಿ, ನೆಲಬಳ್ಳಿ
Creeping Grass	ಕಾಡುಗರಿಕೆ, ಅಂಬಟೆ
Creosote, coaltar	ಕಲ್ಲಿದ್ದಲು ತಾರು ಕ್ರಿಯೊಸೋಟ್, ತಾರೆಣ್ಣೆ ಕ್ರಿಯಾಸೋಟ್
Creosote, lignite tar	ಲಿಗ್ನೈಟ್ ಟಾರಿನ ಕ್ರಿಯೋಸೋಟ್
Creosote, low temperature tar	ಕಡಿಮೆ ಉಷ್ಣತಾಟಾರ್ ಕ್ರಿಯೋಸೋಟ್
Creosote, oil tar	ತೈಲಟಾರ್ ಕ್ರಿಯೋಸೋಟ್
Creosote, petroleum solution	ಪೆಟ್ರೋಲಿಯಂ ದ್ರಾವಣ ಕ್ರಿಯೊಸೋಟ್
Creosote, water gas tar	ಜಲಾನಿಲ ಟಾರ್ ಕ್ರಿಯೊಸೋಟ್
Creosote, wood tar	ದಾರು ಟಾರ್ ಕ್ರಿಯೊಸೋಟ್
Crib test	ಕ್ರಿಬ್ ಪರೀಕ್ಷಣೆ
Cricket	ಚಿಮ್ಮಂಡೆ, ಚಿಟ್ಟೆ
Crop age	ಬೆಳೆವಯಸ್ಸು
Crop, cover	ಹೊದಿಕೆ ಬೆಳೆ, ಆಚ್ಛಾದನ ಬೆಳೆ, ಭೂಸಂರಕ್ಷಣ ಬೆಳೆ
Crop density	ಬೆಳೆ ಸಾಂದ್ರತೆ
Crop diameter	ಬೆಳೆವ್ಯಾಸ
Crop, even aged	ಸಮವಯಸ್ಸಿನ ಬೆಳೆ
Crop, final	ಅಂತಿಮ ಬೆಳೆ
Crop, forest	ಅರಣ್ಯ ಬೆಳೆ
Crop, irregular	ಅನಿಯಮಿತ ಬೆಳೆ
Crop, main	ಮುಖ್ಯ ಬೆಳೆ
Crop, nurse	ಸಸಿಬೆಳೆ
Crop, pole	ವೃಕ್ಷಕ ಬೆಳೆ
Crop, pure	ಶುದ್ಧ ಬೆಳೆ
Crop, regular	1.ನಿಯಮಿತ ಬೆಳೆ, 2.ಸಮಾಯು ಸಸ್ಯ
Crop, sapling	ದೊಡ್ಡ ಸಸಿ ಬೆಳೆ
Crop, seedling	ಚಿಕ್ಕ ಸಸಿ ಬೆಳೆ
Crop, subsidiary	ಸಹಾಯಕ ಬೆಳೆ
Crop type	ಬೆಳೆ ಬಗೆ
Crop, unevenaged	ಅಸಮಾಯು ಬೆಳೆ
Crop, uniform	ಸಮರೂಪಿ ಬೆಳೆ

Cropping, contour	ಸಮಪಾತಳಿ ಬೆಳೆಬೆಳೆಯುವಿಕೆ
Cropping, strip	ಪಟ್ಟೆಬೆಳೆ ಬೆಳೆಯುವಿಕೆ
Cross	ಸಂಕರಣ
Cross, reciprocal	ಪ್ರತಿಸಂಕರಣ, ವಿಪರ್ಯಾಯ ಸಂಕರಣ
Cross breed	ಸಂಕರಣ ತಳಿ
Cross cutting	ಅಡ್ಡ ಕತ್ತರಿಸುವಿಕೆ
Crosser	ಅಡ್ಡ ಸಂಕರಕ
Cross haul	ಅಡ್ಡ ತುಯ್ತ
Crossing	ಸಂಕರಣೆ
Cross pollination	ಅನ್ಯಪರಾಗಸ್ಪರ್ಶ, ಅಡ್ಡಪರಾಗಸ್ಪರ್ಶ
Croton oil	ಜಾಪಾಳಬೀಜ, ನೆರ್ಯಾಲ
Crown	ಮುಕುಟ, ಮುಡಿ, ಶೃಂಗ
Crown class	ಮುಕುಟ ವರ್ಗ, ಶೃಂಗ ವರ್ಗ
Crown closure	ಮುಕುಟಾವರಣ, ಶೃಂಗಾವರಣ
Crown cover	ಮುಕುಟ/ಶೃಂಗ ಹೊದಿಕೆ
Crown density	ಮುಕುಟ/ಶೃಂಗದ ಗಾತ್ರ
Crown depth	ಮುಕುಟದ/ಶೃಂಗದ ಆಳ
Crown development	ಮುಕುಟ/ಶೃಂಗ ಅಭಿವೃದ್ಧಿ
Crown diameter	ಮುಕುಟ/ಶೃಂಗದ ವ್ಯಾಸ
Crown fire	ಮುಕುಟಾಗ್ನಿ, ಚಂಡಕಿಚ್ಚು, ಶೃಂಗಾಗ್ನಿ,
Crown height	ಮುಕುಟದ/ಶೃಂಗದ ಎತ್ತರ,
Crown length	ಮುಕುಟದ/ಶೃಂಗದ ಉದ್ದ,
Crown percent	ಮುಕುಟದ/ಶೃಂಗದ ಶೇಕಡಾ
Crown ratio	ಮುಕುಟಾನುಪಾತ, ಶೃಂಗಾನುಪಾತ
Crown thinning	ಮುಕುಟ/ಶೃಂಗ ತೆಳುವು ಮಾಡುವಿಕೆ,
Crown wedge	ಶೃಂಗದಮುಕುಟವ್ಯಾಸ ಅಳತೆ ಪಟ್ಟಿ
Crown width	ಮುಕುಟದಗಲ ಶೃಂಗದಗಲ,
Crude petroleum	ಕಚ್ಚಾ ಪೆಟ್ರೋಲಿಯಂ
Cruise	ಅರಣ್ಯ ಸಮೀಕ್ಷೆ, ವನವೀಕ್ಷಣೆ
Cruiser	ಅರಣ್ಯ ಸಮೀಕ್ಷಕ
Crumb	ಮಣ್ಣಿನ ಪುಡಿ, ಮುರುಕು, ಚೂರು
Crumb structure	ಮಣ್ಣಿನ ಮುರುಕು/ಚೂರು ರಚನೆ, ಮುರುಕಲು ರಚನೆ
Crust(soil)	ಮಣ್ಣಿನ ಗಟ್ಟಿ ಮೇಲ್ಪದರ

Crustacea	ಕಠಿಣ ಚರ್ಮಿಗಳು, ವಲ್ಕವಂತ ಪ್ರಾಣಿಗಳು
Cryptogams	ಅಪುಷ್ಪವಂತಗಳು
Cud chewers	ಮೆಲಕು ಜೀವಿಗಳು
Cull	ಬೇರ್ಪಡಿಸು
Culm	ಗೆಣ್ಣು, ದಂಟು
Cultivation, shifting	ಸ್ಥಳಾಂತರ ಬೇಸಾಯ
Cultural operation	ಸಾಗುವಳಿ/ಬೇಸಾಯ ಕಾರ್ಯ
Culture	ತಳಿಯೆಬ್ಬಿಸು, ಬೆಳೆಸು, ಸಾಕಣೆ ಮಾಡು
Cup shake	ಬಟ್ಟಲು ಬಿರಿತ
Cup (width wise)	ಬಟ್ಟಲು (ಅಗಲದ)
Cupids Plant	ಮದನಮಂಜರಿಹೂ, ಮನೋರಂಜನಿಹೂ, ಕಂದಾಳ ಸಂಪಿಗೆ
Curative control	ಚಿಕಿತ್ಸಕ ಹತೋಟಿ
Curator	ಸಂಗ್ರಹಾಲಯದ ಮೇಲ್ವಿಚಾರಕ, ಸಂಗ್ರಹಾಧ್ಯಕ್ಷ
Current Annual Forest, Percentage	ಪ್ರಚಲಿತ ವಾರ್ಷಿಕ ಅರಣ್ಯ ಶೇಕಡಾ
Current annual increment	ಪ್ರಚಲಿತ ವಾರ್ಷಿಕ ವರ್ಧನೆ (ಉತ್ಪಾದನೆ, ಬೆಳವಣಿಗೆ)
Curved tooth saw	ಬಾಗಿದ ಹಲ್ಲು ಗರಗಸ/ರಂಪ
Custard apple	ಅಮೃತಫಲ, ಸೀತಾಫಲ, ಅಮುಚಿಕಾಯಿ
Cut, back	ಹಿಂಗೊಯ್ಲು, ಹಿಂಗಟಾಯು, ಪ್ರತಿಕತ್ತರಿಕೆ
Cut, annual	ವಾರ್ಷಿಕ ಕಟಾವು
Cut, harvest	ಫಸಲು/ಸುಗ್ಗಿ ಕಟಾವು
Cut, periodic	ನಿಯತಕಾಲಿಕ ಕಟಾವು
Cut, salvage	ರಕ್ಷಣಾ ಕೊಯ್ಲು
Cut, under	ಕೆಳಕೊಯ್ತ/ಕೊಯ್ಲು
Cutting	ಕಾಂಡತುಂಡು ಮಾಡುವಿಕೆ, ಕಡಿಯುವಿಕೆ
Cutting, cross	ಅಡ್ಡ ಕಾಂಡ ತುಂಡುಮಾಡುವಿಕೆ
Cutting, selective	ಆಯ್ಕೆ ಕತ್ತರಿಸುವಿಕೆ, ಆಯ್ದು ಕತ್ತರಿಸುವಿಕೆ
Cutting age	ಕತ್ತರಿಸುವ ವಯಸ್ಸು
Cutting area, annual	ವಾರ್ಷಿಕ ಕತ್ತರಿಸುವಿಕೆ ಕ್ಷೇತ್ರ
Cutting cycle	ಕತ್ತರಿಸುವಿಕೆ ಚಕ್ರ
Cutting root and shoot	ಬೇರು ಮತ್ತು ಪ್ರಕಾಂಡ ತುಂಡು ಮಾಡುವಿಕೆ
Cutting Section	ಕತ್ತರಿಸುವ ಭಾಗ

Cutting severance	ವಿಭಾಜಕ ಕತ್ತರಿಕೆ, ವಿಭಾಜಕ ಪಾತನೆ
Cutting series	ಕತ್ತರಿಸುವಿಕೆ ಶ್ರೇಣಿ
Cycad	ತಾಳಕಲ್ಪ
Cycle, felling	ಕಡಿತದ ಸುತ್ತು, ಎಲೆಯುದುರುವ ಚಕ್ರ
Cycle, life	ಜೀವನ ಚಕ್ರ
Cycle, nitrogen	ಸಾರಜನಕ ಚಕ್ರ
Cycle, thinning	ತೆಳುವುಮಾಡುವಿಕೆ ಚಕ್ರ
Cymose type	ಮಧ್ಯಾರಂಭಿ ಬಗೆ
Cytoplasm	ಕೋಶದ್ರವ್ಯ

D

Dam	ಕಟ್ಟೆ
Dam, splash	ಸಿಡಿನೀರು ಕಟ್ಟೆ
Damage, Smoke	ಧೂಮಹಾನಿ
Damping off	ತೇವಾಂಶನಾಶ, ತೇವಾಂಶದಿಂದ ಸಸಿಕೊಳೆಯುವಿಕೆ
Dandelion	ಕಾಡುಶಾವಂತಿ, ಡಾಂಡಿಲಿಯನ್ ಹೂ
Dead tree	ಸತ್ತ ಮರ
Debark	ತೊಗಟೆ ತೆಗೆ
Debarking	ತೊಗಟೆ ತೆಗೆಯುವಿಕೆ
Debarking spade	ತೊಗಟೆ ತೆಗೆಯುವ ಸನಿಕೆ(ಗುದ್ದಲಿ)
Debris	ಕಸ, ಮುರುಕಲು ಗುಪ್ಪೆ
Debris burning	ಮುರುಕಲು ಗುಪ್ಪೆ ಸುಡುವಿಕೆ, ಕಸಕಡ್ಡಿ ಸುಡುವಿಕೆ
Decalcification	ಸುಣ್ಣ ತೆಗೆಯುವಿಕೆ
Decay	ಕೊಳೆ
Deciduous	ಎಲೆಯುದುರುವ
Deer	ಜಿಂಕೆ
Deferred grazing	ಮುಂದೂಡಿದ ಮೇಯಿಸುವಿಕೆ
Deficit, saturation	ಸಂತೃಪ್ತಿ ಕೊರತೆ
Deflation	ಗಾಳಿಬಿಡುವಿಕೆ
De flocculation	ಬಿಡಿಯಾಗಿರುವಿಕೆ, ಬೇರ್ಪಡಿಕೆ
Defoliation	ಎಲೆ ಉದುರುವಿಕೆ, ಎಲೆ ತೆಗೆಯುವಿಕೆ
Defoliator	ಎಲೆ ಉದುರಿಸುವ ಹುಳು
Deforest	ಕಾಡು ಕಡಿಯುವಿಕೆ

Deviation, standard	ಮಾನಕ ವಿಚಲನ/ದಿಕ್ಚ್ಯುತಿ
Devil forest	ದೈತ್ಯವನ
Devil's cotton	ಭಂಗಿ ಮರ, ದೆವ್ವ ಹತ್ತಿ
Dew point	1. ಹಿಮಬಿಂದು, ವಾಯುಮಂಡಲದ [illegible]ವಿ, 2. ಇಬ್ಬನಿಯಾಗಲು ಬೇಕಾದ ಶಾಖ ಪ್ರಮಾಣ
Diadelphous	ದ್ವಿಬಂಧಕೇಸರ
Diameter, exploitable	ಪ್ರಯೋಜಕ ವ್ಯಾಸ, ಬಳಕೆಗೆ ಸೂಕ್ತವಾದ ವ್ಯಾಸ
Diameter, mean	ಮಧ್ಯಸ್ಥ ವ್ಯಾಸ, ಮಧ್ಯಮ ವ್ಯಾಸ
Diameter, mid	ಮಧ್ಯವ್ಯಾಸ
Diameter, over bark	ತೊಗಟೆ ಮೇಲಿನ(ಸಹಿತ) ವ್ಯಾಸ
Diameter, tape	ವ್ಯಾಸಮಾಪೀ ಟೇಪು/ಪಟ್ಟಿ
Diameter, top	ಶಿರೋವ್ಯಾಸ
Diameter, under bark	ತೊಗಟೆ ಕೆಳಗಿನ ವ್ಯಾಸ
Diameter class	ವ್ಯಾಸ ವರ್ಗ
Diameter of wire rope	ತಂತೀಹಗ್ಗದ ವ್ಯಾಸ
Diameter quotient	ವ್ಯಾಸಭಾಗಲಬ್ಧ
Dibble, to	ಬೀಜವೂರಿಕೆ
Dichotomous	ದ್ವಿಭಾಗಿತ
Die back	ಮೇಲ್ತುದಿಯಿಂದ ಸಾಯುವಿಕೆ, ತುದಿಯಿಂದ ನಶಿಸುವಿಕೆ
Diffuse porous wood	ವಿಸರಿತ ರಂಧ್ರದ ದಾರು
Diffusion treatment	ವಿಸರಣ ಉಪಚಾರ
Dioecious	ಭಿನ್ನಲಿಂಗೀ, ಏಕಲಿಂಗೀ
Diploid	ದ್ವಿಗುಣಿತ
Dipping	ಅದ್ದುವಿಕೆ
Diptopoda	ದ್ವಿಪಾದಿ
Director of Biological Research	ಜೈವಿಕ ಸಂಶೋಧನ ನಿರ್ದೇಶಕ
Director of Forest Education	ಅರಣ್ಯ ಶಿಕ್ಷಣ ನಿರ್ದೇಶಕ
Director of Forest Products Research	ಅರಣ್ಯ ಉತ್ಪನ್ನ ಸಂಶೋಧನ ನಿರ್ದೇಶಕ
Director of Forestry Research	ಅರಣ್ಯ ಸಂಶೋಧನ ನಿರ್ದೇಶಕ
Direct sowing	ನೇರ ಬಿತ್ತುವಿಕೆ
Disclimax	ವಿಕ್ಷೋಭಪರಮ
Disease, wilt	ಬಾಡುರೋಗ, ಸೊರಗು ರೋಗ

Diseased tree	ರೋಗಪೀಡಿತ ವೃಕ್ಷ, ರೋಗಿ ವೃಕ್ಷ
Disinfestation	ಪೀಡೆನಿವಾರಣೆ, ಪೀಡೆನಾಶನ
Dispersion	ಚೆದರುವಿಕೆ
Disposal, slash	ಕತ್ತರಿಸಿ, ವಿಲೇವಾರಿ ಮಾಡು
Distillation residue	ಬಟ್ಟಿಇಳಿಸಿದ ಉಳಿಕೆ
Distillation test	ಬಟ್ಟಿ ಇಳಿಸುವ ಪರೀಕ್ಷೆ
Distribution, age class	ಆಯುವರ್ಗ ವಿತರಣೆ
Distribution frequency	ಆವೃತ್ತಿ ವಿತರಣೆ
Disturbance climax	ವಿಕ್ಷೋಭ ಪರಾಕಾಷ್ಠತೆ
Dita bark	ಎಲೆಬಾಳೆ, ಮದ್ದಾಲೆ, ಸಪ್ತಪರ್ಣಿ, ಏಳೆಲೆಬಾಳೆ
Documentation Officer	ಪ್ರಲೇಖನ ಅಧಿಕಾರಿ, ದಸ್ತಾವೇಜು ಅಧಿಕಾರಿ
Dogbane	ಅಲ್ಲಮಂದಗಿಡ, ಅರಿಸಿನಹೂ
Dolphin	ಹಂದಿ ಮೀನು
Domesticated	ಪಳಗಿಸಿದ, ಸಾಕಿದ
Dominant	ಪ್ರಭಾವೀ
Dominant character	ಪ್ರಭಾವೀ ಲಕ್ಷಣ
Dominated	ಪ್ರಭಾವಿತವಾಗಿರುವ
Dona planting	ನೆಡುವ ರೀತಿ
Doob Grass	ಗರಿಕೆಹುಲ್ಲು, ಕರ್ಕೆರಿಹುಲ್ಲು
Dormancy, seed	ಬೀಜಸುಪ್ತಾವಸ್ಥೆ
Dormant	ಸುಪ್ತಾವಸ್ಥೆಯ
Dormant bud	ಸುಪ್ತಮೊಗ್ಗು
Dorsal fin	ಬೆನ್ನಿನ ಈಜುರೆಕ್ಕೆ
Double bitted axe	ಈರಲಗಿನ ಕೊಡಲಿ, ದ್ವಿಧಾರಿ ಕೊಡಲಿ
Double diffusion treatment	ದ್ವಿವಿಸರಣ ಉಪಚಾರ
Down feather	ತುಪ್ಪುಳ
Dragging	ಎಳೆಯುವಿಕೆ, ಕರ್ಷಣ
Drag hole	ಎಳೆಯುವ ಕಂಡಿ
Dragling	ಕರ್ಷಕ ಹಗ್ಗ, ಸೆಳೆ ಹಗ್ಗ
Dragons Blood	ರತನ್ ಬೆತ್ತ
Drag saw	ಎಳೆಯುವ ಗರಗಸ
Drain	ಬಸಿಗಾಲುವೆ

Drainage area	ಮಣ್ಣು ಬಸಿಗಾಲುವೆ ಕ್ಷೇತ್ರ
Drainage, impeded	ಬಾಧಿತ ಬಸಿಗಾಲುವೆ
Drainage, soil	ಮಣ್ಣು ಬಸಿಗಾಲುವೆ
Draw bar	ಎಳೆಯುವ ಸಲಾಕೆ
Drift	ಪ್ರವಾಹ, ದಿಕ್ಚುತಿ, ದಿಕ್ಕುಬದಲಿಕೆ
Drift glacial	ಹಿಮನದೀಯ(ವಾಹ) ದಿಕ್ಕುಬದಲಿಕೆ ಹಿಮನದೀಯ ಪ್ರವಾಹ
Driftwood	ತೇಲಿಬಂದ ಕಟ್ಟಿಗೆ, ಕೊಚ್ಚಿ ಬಂದ ಮರ
Drill	ಕೂರಿಗೆ
Drill, seed	ಬೀಜ ಕೂರಿಕೆ
Drive	ಚಾಲನೆಮಾಡು
Drone .	ಗಂಡು ಜೇನುನೊಣ
Drum	ಡ್ರಮ್, ಉರುಳೆ, ಡೋಲು
Drum; groved	ತೋಡುಗೆರೆಯುಳ್ಳ ಡ್ರಮ್
Drupe	ಅಷ್ಟಿಫಲ, ಓಟೀಫಲ
Dry nursery	ಶುಷ್ಕ ನರ್ಸರಿ, ಒಣನರ್ಸರಿ
Dry prunning	ಶುಷ್ಕ ಸಮರಿಕೆ, ಒಣಸಮರಿಕೆ
Dry storm	ಶುಷ್ಕ ಒಣ ಬಿರುಗಾಳಿ
Dry top	ಮೇಲ್ಭಾಗ ಒಣಗಿದ, ಶುಷ್ಕ ಮುಕುಟ ಒಣಗಿದ ಶಿಖರ
Duct, gum	ಗೋಂದುನಾಳ
Duct, resin	ರಾಳನಾಳ
Duff	ಡಫ್, ಒಂದು ರೀತಿಯ ಸಾವಯವ ಮಣ್ಣು
Dune	ಮರಳು ದಿಬ್ಬ
Dungrass	ಗರಿಕೆಹುಲ್ಲು, ಹರಿಯಾಳ
Durability	ತಾಳಿಕೆ, ಬಾಳಿಕೆ
Durability, natural	ನೈಸರ್ಗಿಕ ಬಾಳಿಕೆ
Duramen	ಚೇಗು, ದಾರು, ಕೆಚ್ಚು
Dwarf	ಗಿಡ್ಡ, ಕುಳ್ಳ, ಕುಬ್ಜ
Dye, animal	ಪ್ರಾಣಿಜನ್ಯ ರಂಗು (ಬಣ್ಣ)
Dying back	ಪುನರ್ಬದುಕು
Dysgenic	ಕುಜನನಿಕ, ಶಕ್ತಿಕುಂದುವಿಕೆ ಇಳುವರಿ ಕುಂದುವಿಕೆ

E

Ear	1. ತೆನೆ, 2. ಕಿವಿ
Early wood	ಅಗ್ರದಾರು, ಪ್ರಾರಂಭಿಕ ದಾರು
Earth, brown (brown forest soil)	ಕಂದುಭೂಮಿ (ಕಂದು ಅರಣ್ಯ ಮಣ್ಣು)
Earth crust	ಮಣ್ಣಿನ ಹೆಕ್ಕಳಿಕೆ, ಭೂಮಿಯ ಹೊರಮೈ
Earth slide	ಭೂಪಾತ, ಭೂಕುಸಿತ
Earth, tropical red	ಉಷ್ಣವಲಯದ ಕೆಂಪು ಮಣ್ಣು
Easement	1. ಬಿಡುಗಡೆ, ವಿಮೋಚನೆ, 2. ಅನುಭೋಗದ ಹಕ್ಕು
East Indian Arroroot	ಕೂವೆಗಿಡ, ಅರೋರೂಟ್
Ecesis	ನವಾವಾಸ್ಥ, ಹೊಸನೆಲೆ, ಹೊಸ ಪರಿಸರ
Echard	ಅಪ್ರಾಪ್ಯ ಮಣ್ಣಿನ ಜಲ
Echinate	ಮುಳ್ಳುಗಳಿರುವ
Echinodermata	ಕಂಟಕ ಚರ್ಮಿಗಳು
Ecoclimate	ಪರಿಸರ ವಾಯುಗುಣ
Ecocline	ಪರಿಸರ ಪ್ರವಣತೆ
Ecologist	ಜೀವಿಪರಿಸರಶಾಸ್ತ್ರಜ್ಞ
Ecology	ಜೀವಿಪರಿಸರಶಾಸ್ತ್ರ
Ecology section	ಜೀವಿಪರಿಸರಶಾಸ್ತ್ರ ವಿಭಾಗ
Economics, forest	ಅರಣ್ಯ ಅರ್ಥಶಾಸ್ತ್ರ
Economic maturity	ಆರ್ಥಿಕ ಪರಿಪಕ್ವತೆ
Economic plants	ಆರ್ಥಿಕ ಸಸ್ಯಗಳು
Eco system	ಪರಿಸರ ವ್ಯವಸ್ಥೆ
Ecotone	ಸಂಕ್ರಮಣ ಸಸ್ಯವರ್ಗ
Ectodynamic	ಬಾಹ್ಯ ಪ್ರಭಾವಿತ
Ectodynamorphic	ಬಾಹ್ಯ ಪ್ರಭಾವಿತ ರೂಪೀ
Edaphic	ಮಣ್ಣಿನ
Edaphic factor	ಭೂ ಅಂಶ, ಮಣ್ಣುಕಾರಕ
Edaphology	ಮಣ್ಣು ಪ್ರಭಾವ ವಿಜ್ಞಾನ
Edging	ತುದಿಕತ್ತರಿಸುವಿಕೆ
Editorial Board	ಸಂಪಾದಕ ಮಂಡಲಿ
Editorial Branch	ಸಂಪಾದಕೀಯ ಶಾಖೆ

Eel	ಹಾವು ಮೀನು
Effect, acidity	ಆಮ್ಲತಾ ಪ್ರಭಾವ
Egyptian Lotus(Indian Blue Water Lilly)	ನೀಲತಾವರೆ, ಕನ್ನೈದಿಲೆ
Elephant Apple	ಕಪಿತ್ಥ, ಬಿಲ್ವಾರ, ಬೇಲ
Elephant Creeper	ಚಂದ್ರಪಾದ,ಸಮುದ್ರಬಳ್ಳಿ, ಸಮುದ್ರ ಹಾಲುಬಳ್ಳಿ
Elephant grass	ದಪ್ಪ ನೇಪಿಯರ್ ಹುಲ್ಲು. ಆನೆಹುಲ್ಲು
Elite stand	ಶ್ರೇಷ್ಠ ವೃಕ್ಷ ಸಮೂಹ
Elite thinning	ಶ್ರೇಷ್ಠ ವೃಕ್ಷದ ತೆಳುವು ಮಾಡುವಿಕೆ
Elite tree	ಶ್ರೇಷ್ಠ ವೃಕ್ಷ
Elkesis	ನವಾವಾಸ, ಹೊಸನೆಲೆ
Eluviation	ಮಣ್ಣು ಕೊರೆಯುವಿಕೆ, ಅಪೋಢೀಕರಣ
Embelic myrobalan	ಬೆಟ್ಟನೆಲ್ಲಿ, ದೊಡ್ಡನೆಲ್ಲಿಕಾಯಿ, ಅಮ್ಲಕ
Emergence hole	ಹೊರಬರುವ ರಂಧ್ರ
Emergency period	1. ನಿರ್ಗಮನ ಅವಧಿ, ಹೊರ ಬರುವ ಅವಧಿ, 2. ತುರ್ತುಅವಧಿ
Empty cell process	ಖಾಲಿ ಕೋಶಪ್ರಕ್ರಿಯೆ
Enclave	ಪರಿವೃತ, ಪರಿವೇಶ
Encrustation	ಹೆಕ್ಕಳಿಕೆ, ಚಕ್ಕೆಕಟ್ಟುವಿಕೆ
End coating	ಕೊನೆ ಲೇಪನ
Endemic	ಸ್ಥಳೀಯ, ಸ್ಥಾನಿಕ
Endocarp	ಅಂತರ್ ಫಲ
Endo dynamic	ಅಂತಸ್ಥ ಪ್ರಭಾವಿತ
Endodynamorphic	ಅಂತಸ್ಥ ಪ್ರಭಾವಿತ ರೂಪೀ
Endogenous	ಅಂತರ್ಜಾತ
Endosperm	ಭೂಣಾಹಾರ
Energy, germinative	ಅಂಕುರ ಶಕ್ತಿ, ಮೊಳಕೆ ಶಕ್ತಿ
Energy period	ಶಕ್ತಿ ಅವಧಿ
Engineering Designer	ಎಂಜಿನಿಯರಿಂಗ್ ವಿನ್ಯಾಸಕಾರ
Engineering Division	ಎಂಜಿನಿಯರಿಂಗ್ ವಿಭಾಗ
Engineering material	ಎಂಜಿನಿಯರಿಂಗ್ ಸಾಮಗ್ರಿ
Engineering survey	ಎಂಜಿನಿಯರಿಂಗ್ ಸಮೀಕ್ಷಣೆ
Entomology, Forest	ವನಕೀಟವಿಜ್ಞಾನ, ಅರಣ್ಯ ಕೀಟಶಾಸ್ತ್ರ

Entomophilous plant	ಕೀಟಪರಾಗಿತ ಸಸ್ಯ
Entomophily	ಕೀಟ ಪರಾಗಸ್ಪರ್ಶನ
Enumeration	ಗಣನೆ, ಎಣಿಕೆ
Enumeration, sample	ಮಾದರಿ ಎಣಿಕೆ
Enviornment	ಪರಿಸರ, ವಾತಾವರಣ
Environmental resistance	ಪರಿಸರ ಪ್ರತಿರೋಧಕತೆ/ನಿರೋಧಕತೆ
Epicarp	ಬಾಹ್ಯಫಲ
Epicormic branch	ಕಾಂಡೋದ್ಭವ ರೆಂಬೆ
Epicormic shoot	ಕಾಂಡೋದ್ಭವ ಪ್ರಕಾಂಡ
Epidemic	ಸಾಂಕ್ರಾಮಿಕ
Epidermis	ಹೊರಚರ್ಮ
Epigeal	ಮಣ್ಣುಹೊರಗಿನ, ಭೂಮಿಯ ಮೇಲಿನ
Epigynous ovary	ಉಚ್ಛ ಅಂಡಾಶಯ
Epiphyte	ಅಪ್ಪು ಸಸ್ಯ
Epoch	ಪರ್ವಕಾಲ
Equation, regression	ಸಮಾಶ್ರಯಣ-ಸಮೀಕರಣ
Equivalent, moisture	ತೇವ ಸಮತೆ, ತೇವಾಂಶ ಸಮತೆ
Eradicate	ಬೇರುಸಹಿತ ಕೀಳು, ನಿರ್ಮೂಲನ ಮಾಡು
Erosion	ಕೊಚ್ಚಣೆ
Erosion, accelerated	ತ್ವರಿತ ಕೊಚ್ಚಣೆ,
Erosion, gully	ಕೊರಕಲು ಕೊಚ್ಚಣೆ
Erosion, normal	ಸಾಮಾನ್ಯ ಕೊಚ್ಚಣೆ, ಪ್ರಾಕೃತಿಕ ಕೊಚ್ಚಣೆ
Erosion, rill	ಝರಿ ಕೊಚ್ಚಣೆ
Erosion, sheet	ಹಾಳೆ ಕೊಚ್ಚಣೆ
Erosion, splash	ಸಿಡಿತ ಕೊಚ್ಚಣೆ
Erosion, pavement	ಕಾಲುದಾರಿ ಕೊಚ್ಚಣೆ
Erosion, water	ನೀರು ಕೊಚ್ಚಣೆ
Erosion, wind	ಗಾಳಿ ಕೊಚ್ಚಣೆ
Error, experiment	ಪ್ರಾಯೋಗಿಕ ದೋಷ
Error, standard	ಮಾನಕ ದೋಷ
Espacement	ಎರಡರ ನಡುವಣ ಅಂತರ
Essential oil	ಬಾಷ್ಪಶೀಲ ತೈಲ, ಆರುವ ತೈಲ
Establishment	ಸ್ಥಾಪನೆ

Establishment period	ಸ್ಥಾಪನ ಅವಧಿ
Establishment section	ಸ್ಥಾಪನಾ ವಿಭಾಗ
Eastate, forest	ಅರಣ್ಯ ಆಸ್ತಿ
Estimated actual breaking strength	ಅಂದಾಜು ವಾಸ್ತವ ವಿಘಟನೆ ಸಾಮರ್ಥ್ಯ/ಬಲ
Estimated aggregate breaking strength	ಅಂದಾಜುಸಮಷ್ಟಿ/ವಿಘಟನೆ ಸಾಮರ್ಥ್ಯ/ಬಲ
Estuarine	ಅಳಿವೆ, ನದೀಸಮುದ್ರ ಸಂಗಮ ಸ್ಥಾನ
Ethnology	ಸ್ವಭಾವಶಾಸ್ತ್ರ
Etiolation	ಬಿಳಿಚಿಕೊಳ್ಳುವಿಕೆ
Eugenic	ಸುಜನನಿಕ, ಸುಸಂತಾನಿತ
Eugenics	ಸುಸಂತಾನಶಾಸ್ತ್ರ
European Filbert	ವಿಲಾಯಿತಿ ಬಾದಾಮಿ
Evaporimeter	ಬಾಷ್ಪಮಾಪಕ
Even aged	ಏಕವಯಸ್ಸಿನ, ಸಮವಯಸ್ಕ
Even aged forest	ಸಮವಯಸ್ಕ ಅರಣ್ಯ
Evergreen	ಸದಾಪರ್ಣಿ, ನಿತ್ಯಹಸುರು
Evolution	1. ವಿಕಾಸ, 2. ಕ್ರಾಂತಿ
Evolution of life	ಜೀವವಿಕಾಸ
Exacting	ಅತ್ಯಪೇಕ್ಷೀ
Exchangeable cat ion percent	ವಿನಿಮಯಸಾಧ್ಯ ಶೇಕಡಾ ಧನ ಆಯಾನ್
Exchanger, heat	ಉಷ್ಣ ವಿನಿಮಯಕಾರಿ
Exogenous	ಬಹಿರ್ಜಾತ, ಹೊರಗಿನಿಂದ ತಂದ
Exotic	ವಿದೇಶದಿಂದ ತಂದ, ಹೊರಗಿನಿಂದ ತಂದ
Expectation value	ನಿರೀಕ್ಷಣ ಮೌಲ್ಯ
Experiment, factorial	ಕಾರಕೀಯ ಪ್ರಯೋಗ
Experimental error	ಪ್ರಾಯೋಗಿಕ ದೋಷ
Experimental plot	ಪ್ರಾಯೋಗಿಕ ತಾಕು
Exploitable age	ಸಮುಪಯೋಜ್ಯ ಆಯು, ಶೋಷಕ ವಯಸ್ಸು
Exploitable diameter	ಸಮುಪಯೋಜ್ಯ/ಶೋಷಕ ವ್ಯಾಸ
Exploitation felling	ಸಮುಪಯೋಜನ ಕಡಿದುರುಳಿಸುವಿಕೆ, ಶೋಷಣಕಡಿದುರುಳಿಸುವಿಕೆ

Exploitable girth	ಸಮುಪಯೋಜ/ಶೋಷಕ ಪರಿಧಿ
Exploitable material	ಸಮುಪಯೋಜ್ಯ/ಶೋಷಕ ಸಾಮಗ್ರಿ
Exploitable size	ಸಮುಪಯೋಜ್ಯ/ಶೋಷಕ ಗಾತ್ರ
Exploitation value	ಸಮುಪಯೋಜನ/ಶೋಷಣಮೌಲ್ಯ
Exposure	ಅನಾವರಣ, ತೆರೆದಿಡುವಿಕೆ
Extension forest	ವಿಸ್ತರಣಾ ಅರಣ್ಯ
Extensive forestry	ವಿಸ್ತೃತ ಅರಣ್ಯಶಾಸ್ತ್ರ
Extinguish	ಶಮನ
Extraction products	ಸಂಸ್ಕರಣ ಉತ್ಪನ್ನಗಳು
Eye	ಕಣ್ಣು
Eye splice	ಕಣ್ಣು ಕುಣಿಕೆ, ತಿರಿಕುಣಿಕೆ

F

Face (of saw tooth)	ಗರಗಸದ ಮುಖ
Factor	1. ಗುಣಕ, 2. ಘಟಕ, ಅಂಶ
Factor, anthropogenic	ಮಾನವಜನಿಕ ಕಾರಕ/ಅಂಶ
Factor, autogenic	ಸ್ವಜಾತಕಾರಕ
Factor, biotic	ಜೈವಿಕ ಅಂಶ, ಜೀವೀಯಕಾರಕ
Factor, climatic	ವಾಯುಗುಣಕಾರಕ
Factor, topographic	ಮೇಲ್ಮೈಲಕ್ಷಣಕಾರಕ
Factor of locality	ಸ್ಥಳಕಾರಕ, ಸ್ಥಳೀಯ ಪ್ರಭಾವಗಳು, ಸ್ಥಳೀಯ ಘಟಕಾಂಶಗಳು
Factor, of safety	ಸುರಕ್ಷಣಾ ಅಂಶ
Factorial experiment	ಕಾರಕೀಯ ಪ್ರಯೋಗ
Fallow land	ಬಂಜರು/ಬೀಳು ಭೂಮಿ,
Fall season	ಹೇಮಂತ ಋತು, ಎಲೆಯುದುರುವ ಕಾಲ
False fruit	ಮಿಥ್ಯಾಫಲ
False columba	ದೊಡ್ಡಮರದರಿಸಿನ, ವೇಣಿವೇಲ, ಮರಮಂಜುಳ
False ring	ಹುಸಿವಲಯ/ಉಂಗುರ, ಮಿಥ್ಯಾಉಂಗುರ
Family	ಕುಟುಂಬ
Fan tail	ಬೀಸಣಿಗೆ ತುದಿ
Fang	ವಿಷದ ಹಲ್ಲು
Farm Forestry	ಒಕ್ಕಲು ಅರಣ್ಯಶಾಸ್ತ್ರ, ಫಾರ್ಮ್/ಕೃಷಿ ಅರಣ್ಯಶಾಸ್ತ್ರ

Fauna	(ಪ್ರಾದೇಶಿಕ) ಪ್ರಾಣಿ ಸಂಕುಲ
Feacher palm	ಓಲೆಗರಿಮರ, ಬೀಸಣಿಗೆ ಮರ, ಶ್ರೀತಾಳೆ, ಸಣ್ಣೀಚಲು
Feed	ಮೇವು
Fell (felling)	ಕಡಿ, ಸಮರು
Felling	ಕಡಿಯುವಿಕೆ, ಉರುಳಿಸುವಿಕೆ, ಸಮರುವಿಕೆ
Felling, advance	ಯೋಜನೆಯಲ್ಲಿದ್ದುದಕ್ಕಿಂತಲೂ ಮುಂಗಡ ಕಡಿತ
Felling axe	ಕಡಿತ ಕೊಡಲಿ
Felling Clear	ಚೊಕ್ಕಟ ಕಡಿಯುವಿಕೆ/ಸವರುವಿಕೆ
Felling, exploitation	ಶೋಷಿತ ಕಡಿಯುವಿಕೆ, ಸಮುಪಯೋಜನ ಕಡಿತ
Felling, final	ಅಂತಿಮ ಕಡಿಯುವಿಕೆ
Felling, improvement	ಸುಧಾರಿತ ಕಡಿಯುವಿಕೆ
Felling, increment	ಸಮೃದ್ಧಿ ಕಡಿತ
Felling, intermediate	ಮಧ್ಯವರ್ತಿ ಕಡಿತ
Felling, irregular	ಅನಿಯಮಿತ ಕಡಿಯುವಿಕೆ
Felling, main	ಮುಖ್ಯ ಕಡಿಯುವಿಕೆ
Felling preparatory	ಪ್ರಾರಂಭಿಕ ಕಡಿಯುವಿಕೆ, ತಯಾರಿ ಕಡಿಯುವಿಕೆ
Felling, regeneration	ಪುನರುತ್ಪತ್ತಿ ಕಡಿತ
Felling, salvage	ಸಂರಕ್ಷಣ ಕಡಿತ
Felling, secondary	ದ್ವಿತೀಯ ಹಂತದ ಕಡಿಯುವಿಕೆ
Felling, seeding	ಬೀಜೋತ್ಪಾದನೆಗೆ ಕಡಿಯುವಿಕೆ
Felling, selection	ಆಯ್ಕೆ ಕಡಿತ
Felling severence	ವಿಭಾಜಕ ಕಡಿತ
Felling, shelter wood	ಆಶ್ರಯ ಅರಣ್ಯ ಕಡಿತ
Felling, strip	ಪಟ್ಟಿ ಕಡಿತ
Felling, subsidiary	ಉಪಕಡಿತ
Felling, unregulated	ಅನಿಯಮಿತ ಕಡಿತ
Felling order	ಕಡಿತ ಕ್ರಮ
Felling section	ಕಡಿತ ವಿಭಾಗ
Felling series	ಕಡಿತ ಶ್ರೇಣೀ
Felling wedge	ಕಡಿತದ ಬೆಣೆ
Felling cum regeneration plan	ಕಡಿತ ಮತ್ತು ಪುನರುತ್ಪತ್ತಿ ಯೋಜನೆ
Felling cycle	ಕಡಿತದ ಚಕ್ರ

Felling cycle	ಕಡಿತದ ಚಕ್ರ
Fern	ಜರೀಸಸ್ಯ
Fertility gradient	ಫಲವತ್ತತೆ ಇಳುಕಲು
Fertility index	ಫಲವತ್ತತೆ ಸೂಚಕ
Fertilizer	ರಸಗೊಬ್ಬರ
Fevernut	ಗೆಜ್ಜಿಗೆ ಬಳ್ಳಿ, ಗಜ್ಜಿಗೆ ಕಾಯಿ
Fiber yielding plants	ನಾರು ನೀಡುವ ಸಸ್ಯಗಳು
Fibrous roots	ಜಲ್ಲಿ/ತಂತು ಬೇರುಗಳು
Fiducial limit	ವಿಶ್ವಸನೀಯ ಮಿತಿ
Field Bind Weed	ಹಸುರಾಣಿ ಬಳ್ಳಿ, ಭೂಚಕ್ರಬಳ್ಳಿ, ನರಂಜಿಬಳ್ಳಿ
Field capacity	ಕ್ಷೇತ್ರ ಸಾಮರ್ಥ್ಯ
Field notes	ಕ್ಷೇತ್ರ ಟಿಪ್ಪಣಿ
Field germination	ಕ್ಷೇತ್ರಾಂಕುರಣ, ಕ್ಷೇತ್ರ ಮೊಳೆಯುವಿಕೆ
Field moisture capacity	ಕ್ಷೇತ್ರ ತೇವಸಾಮರ್ಥ್ಯ
Field nursery	ಕ್ಷೇತ್ರ ನರ್ಸರಿ
Field observation	ಕ್ಷೇತ್ರ ವೀಕ್ಷಣೆ
Field work	ಕ್ಷೇತ್ರಕಾರ್ಯ
Filament	ಕೇಸರದಂಡ
Filiform	ತಂತುರೂಪ
Filler	ಪೂರಕ
Fin	ಈಜುರೆಕ್ಕೆ
Final crop	ಅಂತಿಮ ಬೆಳೆ
Final steaming	ಅಂತಿಮ ಹಬೆಕೊಡುವಿಕೆ/ಹಬೆಯಾಡಿಸುವಿಕೆ
Final vaccum	ಅಂತಿಮ ನಿರ್ವಾತ
Final yield	ಅಂತಿಮ ಇಳುವರಿ
Finance, forest	ಅರಣ್ಯ ಹಣಕಾಸು
Financial maturity	ಹಣಕಾಸು/ಆರ್ಥಿಕ ಪರಿಪಕ್ವತೆ
Financial rotation	ಹಣಕಾಸು ಅವರ್ತನ/ಸರದಿ
Financial yield	ಹಣಕಾಸು ಪ್ರಾಪ್ತಿ/ಇಳುವರಿ
Finishing Branch	ಪರಿಷ್ಕರಣ ಶಾಖೆ
Fire belt	ಬೆಂಕಿ ಸಂರಕ್ಷಣಾ ಪಟ್ಟೆ
Fire break	ಅಗ್ನಿ/ಬೆಂಕಿ ತಡೆ
Fire, counter	ವಿರುದ್ಧ ದಿಕ್ಕಿನಿಂದ ಬೆಂಕಿಕೊಡು

Fire, creeping	ತೆವಳು ಬೆಂಕಿ
Fire, crown	ಶೃಂಗ ಬೆಂಕಿ
Fire danger	ಬೆಂಕಿ ಅಪಾಯ
Fire fly	ಮಿಂಚುಹುಳು
Fire, forest	ಅರಣ್ಯ ಅಗ್ನಿ, ದಾವಾನಲ, ಕಾಡ್ಗಿಚ್ಚು
Fire, ground	ನೆಲಬೆಂಕಿ
Fire line	ಅಗ್ನಿರೇಖೆ
Fire, surface	ಮೇಲುರಿ
Fire petrol	ಅಗ್ನಿಕಾವಲಪಡೆ, ಅಗ್ನಿರಕ್ಷಕ, ಅಗ್ನಿಪಹರೆ
Fire presuppression	ಅಗ್ನಿಪೂರ್ವದಮನ
Fire prevention	ಅಗ್ನಿನಿವಾರಣೆ
Fire proofing	ಬೆಂಕಿ ಅಭೇದ್ಯ
Fire protection	ಅಗ್ನಿ/ಬೆಂಕಿ ರಕ್ಷಣೆ
Fire protection officer	ಅಗ್ನಿ ಸಂರಕ್ಷಣೆ ಅಧಿಕಾರಿ
Fire resistance	ಬೆಂಕಿ ನಿರೋಧಕ ಶಕ್ತಿ
Fire retardant	ಅಗ್ನಿಪ್ರತಿಬಂಧಕ
Fire risk	ಅಗ್ನಿಸಂಕಟ, ಬೆಂಕಿ ಗಂಡಾಂತರ
Fire scar	ಬೆಂಕಿ ಗಾಯ
Fire season	ಅಗ್ನಿಋತು, ಬೆಂಕಿ ಹಂಗಾಮು
Fire, sub climax	ಉಪಪರಾಕಾಷ್ಠ ಬೆಂಕಿ, ಬೆಂಕಿ ಉಪಾಂತ್ಯ
Fire suppression	ಅಗ್ನಿದಮನ
Fire trace	ಬೆಂಕಿಗುರುತು
Fire watcher	ಅಗ್ನಿಪಹರೆಯವ, ಅಗ್ನಿ ಕಾವಲುಗಾರ, ಅಗ್ನಿರಕ್ಷಕ
Fire wood	ಉರುವಲು ಕಟ್ಟಿಗೆ
Fire wood stack	ಸೌದೆಕಟ್ಟೆ
Fire wound	ಬೆಂಕಿ ಹುಣ್ಣು/ಗಾಯ, ಅಗ್ನಿವ್ರಣ
Fish berry	ಗರುಡಫಲ, ಕಾಕಮಾರಿ, ಚಿಪ್ಲೊತ್ತಿ
Fish culture	ಮತ್ಸ್ಯಸಂವರ್ಧನೆ, ಮೀನುಸಾಕಣೆ
Fish meal	ಮೀನುಗೊಬ್ಬರ
Fit tree	ಯೋಗ್ಯ ವೃಕ್ಷ
Fixation	ಸ್ಥಿರೀಕರಣ
Fixation, nitrogen	ಸಾರಜನಕ ಸ್ಥಿರೀಕರಣ
Flame spread	ಜ್ವಾಲೆಹರಡುವಿಕೆ

Flash point	ಪ್ರಜ್ವಲನ ಬಿಂದು
Fleet angle	ಸಂಚಾರೀ ಕೋನ
Flocculation	ಬೊಂತೆಕಟ್ಟುವಿಕೆ
Flooded	ಪ್ರವಾಹದಿಂದ ಕೂಡಿದ
Flood plain	ಪ್ರವಾಹ ಭೂಮಿ/ಬಯಲು
Flood tolerant	ಪ್ರವಾಹ ಸಹಿಷ್ಣು
Floor, forest	ವನತಲ, ಅರಣ್ಯತಳ
Flora	ಪ್ರಾದೇಶಿಕ ಸಸ್ಯಸಂಕುಲ
Flora, ground	ಭೂಸಸ್ಯವರ್ಗ
Floral diagram	ಪುಷ್ಪನಕ್ಷೆ
Floral formulae	ಪುಷ್ಪಸೂತ್ರ
Flosses	ಮರದರಳೆಗಳು
Flowering, gregarious	ಗುಂಪಾಗಿ ಹೂಬಿಡುವಿಕೆ
Fluke	ಬಾಲ, ಪುಷ್ಪ, ತೋಕೆ
Flume	ಕಾಲುವೆ
Flash door	ಮಟ್ಟ ಬಾಗಿಲು
Fluted bole	ಉಬ್ಬುತಗ್ಗುಗಳಿದ್ದ ಕಾಂಡ
Fluxion, soil	ಮಣ್ಣು ಪ್ರವಾಹ
Fodder crop	ಮೇವಿನ ಬೆಳೆ
Fodder tree	ಎಲೆ ಮೇವಿನ ಗಿಡ ಮರ
Foliage	ಪತ್ರಗುಚ್ಛ
Follicle	ಕುಹರ
Forest act	ಅರಣ್ಯಶಾಸನ
Forest capital	ಅರಣ್ಯಬಂಡವಾಳ
Foot, running	ಉದ್ದನೆ ಅಡಿ
Foot, square	ಚದರಡಿ
Forage	ಮೇವು
Forb	ತೃಣೇತರ
Forest	ವನ, ಅರಣ್ಯ, ಕಾಡು
Forest, abnormal	ಅಸಾಮಾನ್ಯ ಕಾಡು/ಅರಣ್ಯ
Forest, accessible	ಪ್ರವೇಶಸಾಧ್ಯ ವನ
Forest, administration	ಅರಣ್ಯಾಡಳಿತ
Forest, beach	ಪುಲಿನ ವನ, ಮರಳುಗಾಡು

Forest, climax	ಚರಮ ವನ, ಪರಾಕಾಷ್ಠಾರಣ್ಯ
Forest, closed	ಸಂವೃತ ವನ, ಅವೃತವನ, ಮುಚ್ಚಿದ ಕಾಡು
Forest, community	ಸಾಮುದಾಯಿಕ ವನ
Forest, coppice	ಕುರುಚಲು ಕಾಡು, ಚಿಗುರು ಕಾಡು
Forest, devil	ದೈತ್ಯವನ
Forest, evenaged	ಸಮಾಯುವನ, ಸಮವಯಸ್ಸಿನ ಕಾಡು
Forest, high	ಉಚ್ಛವನ, ಉನ್ನತ ಕಾಡು
Forest, inaccessible	ಅಗಮ್ಯ ವನ
Forest, irregular	ಅನಿಯಮಿತ ವನ, ಮಿಶ್ರವಯಸ್ಸಿನ ಕಾಡು
Forest, littoral	ಕಡಲತೀರದ ಕಾಡು
Forest, manmade	ಮಾನವ ನಿರ್ಮಿತ ಅರಣ್ಯ
Forest, minor	ಅಪ್ರಮುಖ ಅಡವಿ, ಅಪ್ರಧಾನ ಕಾಡು
Forest, mixed	ಮಿಶ್ರಕಾಡು
Forest, normal	ಸಾಮಾನ್ಯ ಕಾಡು
Forest, organised	ವ್ಯವಸ್ಥಿತ ಅಡವಿ
Forest, primary	ಪ್ರಾಥಮಿಕ ಕಾಡು
Forest, primeval	ಪ್ರಾಗ್ವನ, ಅನಾದಿಕಾಲದ ಅರಣ್ಯ
Forest, proper	ಅಚ್ಚಡವಿ
Forest, protected	ರಕ್ಷಿತ ವನ/ಕಾಡು/ಅರಣ್ಯ
Forest, pure	ಶುದ್ಧ ಅರಣ್ಯ
Forest, regular	ನಿಯಮಿತ ವನ
Forest, reserved	ಮೀಸಲು ಕಾಡು
Forest, riparian	ನದೀತೀರದಕಾಡು
Forest, riverain	ನದಿತೀರದ ಕಾಡು
Forest, sclerophyllous	ದೃಢಪರ್ಣವನ, ದೃಢಎಲೆಗಳ ಕಾಡು
Forest, scrub	ಗುಲ್ಮವನ, ಕುರುಚಲು ಕಾಡು
Forest, seasonal	ಋತುವನ, ಕಾಲಿಕವನ
Forest, secondary	ದ್ವಿತೀಯಕ/ಮಾಧ್ಯಮಿಕ ವನ
